# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
80,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 29 • ನೋಂದಣಿ ನಂ.:KARKAN/2023/88055 • ವಿಜಯನಗರ • 24.07.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 29 • Reg.No:KARKAN/2023/88055 • VIJAYANAGARA • 24.07.2024 • Wednesday • Page:04 • Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಪುಟ: 4ರಲ್ಲಿ ನೋಡಿ

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

HAMPI TIMES VIJAYANAGARA

ಹಂಪಿ ಟೈಮ್ಸ್ ಇ-ಪೇಪರ್

94486 33038 www.hampitimes.com / epaper.hampitimes.com Vijayanagara hampitimes@gmail.com


## ಮೈಕ್ರೋ ನ್ಯೂಸ್

### ಇಂದು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ಕಮಲಾಪುರ ಪೊಲೀಸ್ ಠಾಣೆಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜ್‌ನಲ್ಲಿ ಜು.24 ರ ಬೆಳಿಗ್ಗೆ 11ಕ್ಕೆ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಜಾಗೃತಿ ಕಾರ್ಯಕ್ರಮ ನಡೆಯಲಿದೆ.

ಎಸ್‌ಪಿ ಬಿಎಲ್.ಶ್ರೀಹರಿಬಾಬು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ದುರುಪಯೋಗ, ಅಕ್ರಮ ಸಾಗಾಣಿಕೆ ವಿರುದ್ಧ ಜಾಗೃತಿ, 18 ವರ್ಷದೊಳಗಿನ ಮಕ್ಕಳು ದ್ವಿ ಚಕ್ರ ವಾಹನಗಳನ್ನು ಚಾಲನೆ ಮಾಡುವುದರ ಬಗ್ಗೆ, ಪೋಕ್ಸೋ ಕಾಯ್ದೆ 2012 ರ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ. ಡಿವೈಎಸ್‌ಪಿ ಮಂಜುನಾಥ, ಸಿಪಿಐ ಲಖನ್ ಅರ್.ಮಸಗುಪ್ಪಿ ಇತರರು ಭಾಗವಹಿಸಲಿದದ್ದಾರೆ ಎಂದು ಪಿಎಸ್‌ಐ ಬಸವರಾಜ್ ತಿಳಿಸಿದ್ದಾರೆ.

### ಜು.25, 26 ರಂದು ಕಾರ್ಗಿಲ್ ವಿಜಯ ದಿವಸ್ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಮಾಜಿ ಸೈನಿಕರು ಮತ್ತು ವೀರ ನಾರಿಯರ ಕಲ್ಯಾಣ ಸಮಿತಿ ವತಿಯಿಂದ 25 ನೇ ಕಾರ್ಗಿಲ್ ವಿಜಯ ದಿವಸ್ ದಿನಾಚರಣೆಯ ಸಮಾರಂಭವನ್ನು ಜು.25 ಮತ್ತು 26 ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಜು.25 ರಂದು ಸಂಜೆ 06 ಗಂಟೆಗೆ ನಗರದ ಎಸ್‌ಪಿ ವೃತ್ತದಿಂದ ದುರ್ಗಮ್ಮ ಗುಡಿಯ ಮೂಲಕ ಎಸ್‌ಪಿ ಕಚೇರಿಯ ಮುಂಭಾಗದ ಅಮರ್ ಜವಾನ್ ಯುದ್ಧ ಸ್ಮಾರಕದವರೆಗೆ ಮೇಣದ ಬತ್ತಿಯೊಂದಿಗೆ ಪಾದಯಾತ್ರೆ ನಡೆಸಿ, ಸ್ಮಾರಕಕ್ಕೆ ಶ್ರದ್ಧಾಂಜಲಿ ಅರ್ಪಿಸಲಾಗುವುದು.

ಜು.26 ರಂದು ಬೆಳಿಗ್ಗೆ 09 ಗಂಟೆಗೆ ಎಸ್‌ಪಿ ಕಚೇರಿಯ ಮುಂಭಾಗದ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ಗಣ್ಯರು, ಮಾಜಿ ಸೈನಿಕರು, ವೀರ ನಾರಿಯರು ಹಾಗೂ ಸಾರ್ವಜನಿಕರಿಂದ ಪುಷ್ಪಗುಚ್ಛ ಮತ್ತು ಹೂವಿನ ಮಾಲಾರ್ಪಣೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

### ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಸಂಡೂರು**

ಸಂಡೂರು ಪುರಸಭೆ ವ್ಯಾಪ್ತಿಯಲ್ಲಿ ಬರುವ ವಸತಿ ರಹಿತ ಲಿಂಗತ್ವ ಅಲ್ಪ ಸಂಖ್ಯಾತ ಫಲಾನುಭವಿಗಳಿಗೆ ದೇವರಾಜ ಅರಸು ವಸತಿ ಯೋಜನೆ ಅಡಿ ವಸತಿ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಡೂರು ಪುರಸಭೆಯ ಮುಖ್ಯಾಧಿಕಾರಿ ಕೆ.ಜಯಣ್ಣ ಅವರು ತಿಳಿಸಿದ್ದಾರೆ.

**ದಾಖಲೆಗಳು:**

ಅರ್ಜಿದಾರರ ಆಧಾರ್ ಕಾರ್ಡ್ ಮತ್ತು ಕುಟುಂಬದವರ ಆಧಾರ್‌ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ ನಕಲು ಪ್ರತಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಫೋಟೋ ಒದಗಿಸಬೇಕು. ಪುರಸಭೆ ವ್ಯಾಪ್ತಿಯಲ್ಲಿ ಸ್ವಂತ ನಿವೇಶನ ಹೊಂದಿದ ಖಾಲಿ ನಿವೇಶನದ ಪ್ರಸಕ್ತ ಸಾಲಿನ ನಮೂನೆ-3ರ ನಕಲು ಪ್ರತಿ, ಮುಟೇಶನ್ ಪ್ರತಿ, ಕ್ರಯ ಪತ್ರ, ದಾನ ಪತ್ರದ ನಕಲು, ಪ್ರಸಕ್ತ ಸಾಲಿಗೆ ಇರುವಂತೆ 15 ವರ್ಷದ ಇಸಿ ದಾಖಲೆಗಳ ನಕಲು ಪ್ರತಿಗಳೊಂದಿಗೆ ಅರ್ಜಿ ನಮೂನೆ ನೀಡಬೇಕು. ಒಟ್ಟು 89 ಗುರಿಯನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಸಂಡೂರು ಪುರಸಭೆ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಲಿಂಗತ್ವಕ್ಕೆ ಸಿಕ್ಕ ಸಮಾನತೆಯಂತೆ ಆರ್ಥಿಕ ಸಮಾನತೆಗೂ ದೊರೆಯಲಿ

## ಸಂಡೂರಿನ ಪ್ರಭು ಸಂಸ್ಥಾನ ವಿರಕ್ತಮಠದ ಪ್ರಭು ಸ್ವಾಮೀಜಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಸರ್ವ ಜನಾಂಗದ ಶಾಂತಿಯ ತೋಟದ ಸನ್ಮಾರ್ಗದವರು ನಮ್ಮ ಶರಣರು. ಅವರ ನಿತ್ಯ ಸ್ಮರಣೆಯ ಜೊತೆಗೆ ಅವರ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ನಡೆಯೋಣ ಎಂದು ಸಂಡೂರಿನ ಪ್ರಭು ಸಂಸ್ಥಾನ ವಿರಕ್ತಮಠದ ಪ್ರಭು ಸ್ವಾಮೀಜಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಒಳಾಂಗಣ ಕ್ರೀಡಾಂಗಣದ ಸಭಾಂಗಣದಲ್ಲಿ ನಡೆದ ಶಿವಶರಣ ಹಡಪದ ಅಪ್ಪಣ್ಣನವರ ಜಯಂತ್ಯುತ್ಸವವನ್ನು ದೀಪ ಬೆಳಗಿಸಿ, ಶರಣರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ ಬಳಿಕ ಅವರು ಮಾತನಾಡಿದರು. ಹಡಪದ ಅಪ್ಪಣ್ಣ ಸಮುದಾಯದವರಿಗೆ ಲಿಂಗತ್ವದಲ್ಲಿ ಸಿಕ್ಕ ಸಮಾನತೆಯು ಆರ್ಥಿಕವಾಗಿ ಸಿಕ್ಕಿಲ್ಲ. ಇನ್ನಾದರೂ ಸವಲತ್ತುಗಳ ಸೌಭಾಗ್ಯ ನಿಮ್ಮ ಮನೆ ಬಾಗಿಲಿಗೆ ಬರುವಂತಾಗಲಿ. ಅರ್ಥಗರ್ಭಿತ ವಚನಗಳು ಬರಿ ಓದಲಿಕ್ಕಷ್ಟೇ ಸೀಮಿತವಾಗಿರದೇ ಬದುಕಿನಲ್ಲಿಯೂ ಪ್ರವಚನಗಳ ಮಹತ್ವವನ್ನು ತಿಳಿದು ನಡೆಯೋಣ ಎಂದರು.

ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್.ಎಫ್ ಇಮಾಮ್ ನಿಯಾಜಿ ಅವರು ಮಾತನಾಡಿ, ಅಪ್ಪಣ್ಣನವರು 200ಕ್ಕಿಂತ ಹೆಚ್ಚು ವಚನಗಳನ್ನು ರಚಿಸಿದ್ದಾರೆ. ಪ್ರತಿಯೊಬ್ಬರು ಗುರು ಹಿರಿಯರ ಮಾರ್ಗದರ್ಶನದಲ್ಲಿ ಬೆಳೆದು, ಸಮಾಜದ ಏಳಿಗೆಗೆ ಶ್ರಮಿಸೋಣ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಬಸವರಾಜ ಟಿ.ಎಚ್. ಅವರು ಉಪನ್ಯಾಸ ನೀಡಿ, ಅಪ್ಪಣ್ಣನವರು ಇಷ್ಟಲಿಂಗ ಸಾಧನೆಯಲ್ಲಿ ಉತ್ತುಂಗಕ್ಕೇರಿ ಸಾಧನೆ ಮಾಡಿದವರು. ಅಪ್ಪಣ್ಣನವರು ಬಸವಣ್ಣನವರ ಆಪ್ತ ಸಲಹೆಗಾರರಾಗಿದ್ದರು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ಧಲಿಂಗೇಶ ರಂಗಣ್ಣನವರ್ ಪ್ರಾಸ್ತಾವಿಕ ಮಾತನಾಡಿ, ಶರಣಗಣದ ವಿಚಾರಧಾರೆಯಲ್ಲಿ ಬೆಳೆದು ಬಂದ ನಾವೆಲ್ಲರೂ ಬೇಧ- ಭಾವ ತೊರೆದು ಸಂತ ಶರಣರ ಸನ್ಮಾರ್ಗದಲ್ಲಿ ನಡೆಯೋಣ ಎಂದರು.

ಕಾರ್ಯಕ್ರಮಕ್ಕೆ ಮೊದಲು ಅಪ್ಪಣ್ಣನವರ ಭಾವಚಿತ್ರದ ಮೆರವಣಿಗೆಯು ಬಸವೇಶ್ವರ ವೃತ್ತದಿಂದ ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣಕ್ಕೆ ಬಂದಿ ಸೇರಿತು.

ಕಾರ್ಯಕ್ರಮದಲ್ಲಿ ಹಡಪದ ಸಮಾಜದ ಜಿಲ್ಲಾಧ್ಯಕ್ಷರಾದ ಹೆಚ್.ಮಲ್ಲಪ್ಪ, ಹೊಸಪೇಟೆಯ ತಾಲೂಕಾಧ್ಯಕ್ಷರಾದ ಹೆಚ್.ಬಸವರಾಜಪ್ಪ, ನಿವೃತ್ತ ಪ್ರಾಧ್ಯಾಪಕರಾದ ಮೃತ್ಯುಂಜಯ ರುಮಾಲೆ, ಬಸವಬಳಗದ ಅಧ್ಯಕ್ಷರಾದ ಸವಕಿರಣ ಸ್ವಾಮೀಜಿ, ಮಲಪನಗುಡಿಯ ಗೌರವಾಧ್ಯಕ್ಷರಾದ ಹೆಚ್.ಶೇಖರಪ್ಪ, ವೀರಶೈವ ಸಮಾಜದ ಮುಖಂಡರಾದ ಗೊಗ್ಗ ಚನ್ನಬಸಪ್ಪನವರು, ಜಿಲ್ಲಾ ಪಂಚಾಯತ್‌ನ ಅಧಿಕಾರಿಗಳಾದ ಅಶೋಕ ತೋಟದ, ಶಿವಶರಣ ಸಮಾಜದ ಜನಾಂಗದವರು ಭಾಗಿಯಾಗಿದ್ದರು. ಕೂಡ್ಲಿಗಿಯ ಪತ್ರಕರ್ತ ವಿರೇಶ ಕಣಕಲ್‌ಮಠ ಅವರು ನಿರೂಪಿಸಿದರು. ಪಂಡಿತ್ ಪುಟ್ಟರಾಜ ಗವಾಯಿಗಳ ಸಾಂಸ್ಕೃತಿಕ ಮತ್ತು ಸಮಾಜ ಸೇವಾ ಚಾರ್ಟಬಲ್ ಟ್ರಸ್ಟ್ ಮರಿಯಮ್ಮನಹಳ್ಳಿಯ ಗಾಯಕರಾದ ಚಂದ್ರಕಾಂತ, ಕೊಟ್ರೇಶ್, ದುರುಗಪ್ಪ, ದುರುಗೇಶ್ ಅವರಿಂದ ನಾಡಗೀತೆ ಮತ್ತು ಸುಗಮ ಸಂಗೀತ ಕಾರ್ಯಕ್ರಮ ಜರುಗಿತು.

# ಮೆದುಳಿನ ಆರೋಗ್ಯಕ್ಕಾಗಿ ಯೋಗ, ಧ್ಯಾನ ಅತ್ಯವಶ್ಯ



**ಹಂಪಿ ಟೈಮ್ಸ್ ಹೊಸಪೇಟೆ**

ಮೆದುಳಿನ ಆರೋಗ್ಯವು ನಿತ್ಯದ ಜೀವನಕ್ಕೆ ಅತ್ಯಗತ್ಯ. ಯೋಗ, ಧ್ಯಾನಗಳಂತಹ ಆರೋಗ್ಯಕರ ಹವ್ಯಾಸಗಳಿಂದ ಮೆದುಳನ್ನು ಉತ್ತಮವಾಗಿಟ್ಟುಕೊಳ್ಳಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಂಕರ್ ನಾಯ್ಕ ಎಲ್.ಆರ್. ಹೇಳಿದರು.

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, >> 4

# ತಮಿಳು ಕಾವ್ಯ ಮೀಮಾಂಸೆಯಲ್ಲಿ ದ್ರಾವಿಡರ ಪಾತ್ರವಿದೆ

## ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿನಿಧಿ ಉಪನ್ಯಾನದಲ್ಲಿ ಡಾ.ತಮಿಳ್ ಸೆಲ್ವಿ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ತೊಳ್‌ಕಾಪಿಯಂ ಕೇವಲ ತಮಿಳರ ಕೃತಿಯಾಗಿರದೆ ಪೂರ್ಣ ದ್ರಾವಿಡ ಭಾಷಿಕರ ಕಾವ್ಯಮೀಮಾಂಸೆ ಕೃತಿಯಾಗಿದೆ ಎಂದು ಚನ್ನೈನ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ತಮಿಳ್ ಸೆಲ್ವಿ ಅವರು ಹೇಳಿದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗ ಮತ್ತು ಅಮ್ಮೆಂಬಳ ಶಂಕರನಾರಾಯಣ ನಾವಡ ದತ್ತಿನಿಧಿ ಆಯೋಜಿಸಿದ್ದ ತಮಿಳು ಕಾವ್ಯ ಮೀಮಾಂಸೆ ವಿಷಯದಲ್ಲಿ ವಿಶೇಷ ಉಪನ್ಯಾಸ ನೀಡಿದರು. ತಮಿಳು ಭಾಷೆ ಮತ್ತು ಬರಹಗಾರರು ಸಂಸ್ಕೃತ ಪ್ರಭಾವದಿಂದ ತಮ್ಮ ಸಾಹಿತ್ಯವನ್ನು ದೂರ




ಉಳಿಸಿಕೊಳ್ಳುವ ಪ್ರಯತ್ನದಲ್ಲಿ ದ್ರಾವಿಡರಿಗೆ ಅಗತ್ಯವಾದ ಮತ್ತು ಅವರ ವಿಶೇಷ ಶೈಲಿಯ ಕಾವ್ಯ ಮೀಮಾಂಸೆ ಪದ್ಧತಿಯನ್ನು ಹೊಂದಿದ್ದರು ಎಂದು ತೊಳ್‌ಕಾಪಿಯಂ ಕೃತಿ ತಿಳಿಸುತ್ತದೆ. ಇದರಲ್ಲಿ ನಾಲ್ಕುನೂರ ಇಪ್ಪತ್ತೇಳು ಜನಕವಿಗಳಿದ್ದು, ಅದರಲ್ಲಿ ಮುವ್ವತ್ತು ಜನ ಕವಯತ್ರಿಯರಿದ್ದರು. ಮಹಿಳೆಯರಿಗೂ ಇದ್ದ ಬರವಣಿಗೆ ಹಾಗೂ ಸ್ವಾತಂತ್ರ್ಯದ ಬಗೆಗೆ ಹೇಳುತ್ತಾ ಆಗಂ ಮತ್ತು ಪುರಂ ಎಂಬ ಕಾವ್ಯ ವಸ್ತುಗಳು ಪ್ರಧಾನವಾದವು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ. ಮೋಹನ ಕುಂಟಾರ್ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಶ್ರೀ ಅಮ್ಮೆಂಬಳ ಶಂಕರ ನಾರಾಯಣ ನಾವಡ ಅವರ ಬಗ್ಗೆ ಮತ್ತು ಅವರ ಅನುವಾದಗಳ ಮತ್ತು ಕಾವ್ಯ ಆಸಕ್ತಿಗಳ ಬಗ್ಗೆ ತಿಳಿಸಿದರು. ವಿಶ್ವವಿದ್ಯಾಲಯದ ಸಂಶೋಧನಾರ್ಥಿಗಳು ಭಾಗವಹಿಸಿದ್ದರು. ವಿನುತಾ ಪ್ರಾರ್ಥಿಸಿದರು, ಜಯಶ್ರೀ ಸ್ವಾಗತಿಸಿದರು, ರೆಬೆಕ್ಕಾ ನಿರೂಪಿಸಿದರು, ಶ್ವೇತಾ ಬಾಳಿ ವಂದಿಸಿದರು.

# ಹಂಪಿ ದೇವಸ್ಥಾನದ ಹುಂಡಿಗಳಲ್ಲಿ 19.36 ಲಕ್ಷ ರೂ. ಸಂಗ್ರಹ

## ಮಂಗಳಾರತಿ ತಟ್ಟೆಗೆ ಹಾಕುತ್ತಿದ್ದ 10,87,500 ರೂ ಮುಖ್ಯ ಹುಂಡಿಗೆ | ಇಒ ಹನುಮಂತಪ್ಪ ಹೇಳಿಕೆ

**◆ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಶ್ರೀ ವಿರೂಪಾಕ್ಷೇಶ್ವರಸ್ವಾಮಿಯ ದೇವಸ್ಥಾನದ ಗರ್ಭಗುಡಿ ಪ್ರವೇಶದ್ವಾರದಲ್ಲಿ ಮಂಗಳಾರತಿ ತಟ್ಟೆಯ ಬದಲಿಗೆ ಹುಂಡಿಗೆ ಹಾಕಿಸಲಾಗುತ್ತಿದ್ದ ಒಟ್ಟು ಕಾಣಿಕೆ ಮೊತ್ತ ಮೂರು ತಿಂಗಳಲ್ಲಿ 10,87,500 ರೂ ಸಂಗ್ರಹವಾಗಿದೆ. ಉದ್ಧಾನ ವೀರಭದ್ರ ದೇವಸ್ಥಾನದ ಹುಂಡಿಯಲ್ಲಿ 3,06,980, ರೂ, ಚಕ್ರತೀರ್ಥ ಕೋದಂಡರಾಮಸ್ವಾಮಿ ದೇವಸ್ಥಾನ ಹುಂಡಿಯಲ್ಲಿ 1,83,912 ರೂ ಮತ್ತು ಶ್ರೀ ಯಂತ್ರೋದ್ಧಾರಕ ಆಂಜನೇಯಸ್ವಾಮಿ ದೇವಸ್ಥಾನದ ಹುಂಡಿಯಲ್ಲಿ 3,87,858 ರೂಗಳು ಸೇರಿ ಒಟ್ಟು 19 ಲಕ್ಷ 36 ಸಾವಿರ 250 ರೂ ಸಂಗ್ರಹವಾಗಿದೆ ಎಂದು ಹಿಂದೂ ಧಾರ್ಮಿಕ ದತ್ತಿ ಉಂಬಳಿಗಳ ಇಲಾಖೆಯ, ಶ್ರೀ ಹಂಪಿ ವಿರೂಪಾಕ್ಷೇಶ್ವಸ್ವಾಮಿ ದೇವಸ್ಥಾನದ ಇಒ ಹನುಮತಪ್ಪ ತಿಳಿಸಿದ್ದಾರೆ.

ಶ್ರೀ ವಿರೂಪಾಕ್ಷೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೂರು ತಿಂಗಳಿಗೆ ಹುಂಡಿ ಎಣಿಕೆ ಮಾಡಲಾಗಿದ್ದು, ಸುಮಾರು 10.87 ಲಕ್ಷ ರೂ ಸಂಗ್ರಹವಾಗಿದ್ದು, ಇನ್ನುಳಿದ ಮೂರು ದೇವಸ್ಥಾನಗಳಲ್ಲಿ 11 ತಿಂಗಳಿಗೆ ಹುಂಡಿಯನ್ನು ತೆಗೆದು ಎಣಿಕೆ ಮಾಡಲಾಗಿದೆ. ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ಮಂಗಳಾರತಿ ತಟ್ಟೆಗೆ ವಾರ್ಷಿಕ 50 ಲಕ್ಷ ರೂ ಸಂಗ್ರಹವಾಗಬಹುದು. ವಿಶೇಷ ಆಚರಣೆ, ಕಾರ್ಯಕ್ರಮಗಳು ಮತ್ತು ಪ್ರವಾಸಿಗರು ಸಂಖ್ಯೆ ಹೆಚ್ಚಿದಷ್ಟು ಮತ್ತಷ್ಟು ಅಧಿಕ ಕಾಣಿಕೆ ಸಂಗ್ರಹವಾಗಲಿದೆ. ದೇವಸ್ಥಾನದ ಅಭಿವೃದ್ಧಿಗೆ ಭಕ್ತರ ಕಾಣಿಕೆ ಸದ್ಬಳಕೆಯಾಗಲಿದೆ ಎಂದು ತಿಳಿಸಿದರು.

ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮಿಗಳು, ಸಹಾಯಕ ಆಯುಕ್ತ ಗಂಗಾಧರಪ್ಪ, ಕಾರ್ಯನಿರ್ವಾಹಕ ಅದಿಕಾರಿ ಹನುಮಂತ, ಚೇತನ ಇತರರು ಹುಂಡಿ ಎಣಕೆ ವೇಳೆ ಇದ್ದರು.

# ಡೆಂಗಿ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಡೆಂಗೆ ಮತ್ತು ಚಿಕೂನ್ ಗುನ್ಯ ಪ್ರಕರಣಗಳು ಹೆಚ್ಚದಂತೆ ಎಲ್ಲಾ ರೀತಿಯ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ್ ಅವರು ತಿಳಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆರೋಗ್ಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಹಾಗೂ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಜುಲೈ 22 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸೊಳ್ಳೆಕಚ್ಚುವುದರಿಂದ ಡೆಂಗೆ ಹರಡುತ್ತಿದ್ದು, ಸೊಳ್ಳೆಪ್ರತಿಬಂಧಕಗಳನ್ನು ಹೆಚ್ಚಿಗೆ ಬಳಸಿ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕು ಎಂದು ವ್ಯಾಪಕವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. >>3

# ವಿವಿಧ ಖಾಲಿ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಡಿಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ತ್ರೀರೋಗ-ಪ್ರಸೂತಿ ತಜ್ಞರು 3 ಹುದ್ದೆಗಳು, ಮಕ್ಕಳ ತಜ್ಞರು-4, ಎನ್‌ಆರ್‌ಸಿ 1, ಎಂಹೆಚ್ 2, ಐಸಿಯು/ಹೆಚ್‌ಡಿಯು 11, ಯುಪಿಹೆಚ್‌ಸಿ 2, ನಮ್ಮ ಕ್ಲಿನಿಕ್ 5, ಎನ್‌ಸಿಡಿ 5 ವೈದ್ಯಾಧಿಕಾರಿಗಳ ಹುದ್ದೆಗಳು, ಜಿಲ್ಲಾ ಲೆಕ್ಕಪತ್ರ ವ್ಯವಸ್ಥಾಪಕರು-1, ಆಡಿಯೊಮೆಟ್ರಿಕ್ ಸಹಾಯಕರು-1, ಶ್ರವಣದೋಷವುಳ್ಳ ಮಕ್ಕಳ ಬೋಧಕರು-1, ಡಿಇಐಸಿ ಮ್ಯಾನೇಜರ್-1, ಪಿಹೆಚ್‌ಸಿಒ(ಮಹಿಳೆ)-1, ಆರೋಗ್ಯ ನಿರೀಕ್ಷಣಾಧಿಕಾರಿಯ 1 ಸ್ಥಾನಗಳು ಖಾಲಿ ಇವೆ. ಹಿರಿಯ ಪ್ರಾಥಮಿಕ ಆರೋಗ್ಯ >>4

ಹಂಪಿ ಟೈಮ್ಸ್
HAMPI TIMES

## ವಿಜ್ಞಾನ

# ಏಡಿಗಳು ಏಕೆ ಪಾರ್ಶ್ವದಿಂದ ಚಲಿಸುತ್ತವೆ?

■ ಆರ್.ಬಿ.ಗುರುಬಸವರಾಜ

ಶೈಕ್ಷಣಿಕ ಪ್ರವಾಸಕ್ಕೆಂದು ಹೋದ ಬಯಲುಸೀಮೆಯ ವಿದ್ಯಾರ್ಥಿಗಳು ಕಡಲ ಕಿನಾರೆಯಲ್ಲಿ ಜೀವಿಗಳ ಬಗ್ಗೆ ಅಧ್ಯಯನ ನಡೆಸುತ್ತಿದ್ದರು. ಕಡಲ ದಡದಲ್ಲಿದ್ದ ಕೆಲವು ಸಮುದ್ರ ಜೀವಿಗಳ ಪಳೆಯುಳಿಕೆಗಳನ್ನು ಸಂಗ್ರಹಿಸುವುದರಲ್ಲಿ ಮಗ್ನರಾಗಿದ್ದರು. ಆಗ ಅಲ್ಲಿಗೆ ಏಡಿಯ ಆಗಮನವಾಯಿತು. ವಿದ್ಯಾರ್ಥಿಗಳೆಲ್ಲರೂ 'ಹೋ,,,, ಏಡಿ, ಏಡಿ' ಎಂದು ಕುಣಿದಾಡತೊಡಗಿದರು. ಇವರ ಗದ್ದಲದಿಂದ ಗಲಿಬಿಲಿಗೊಂಡ ಏಡಿ ಕ್ಷಣ ಕಾಲ ಚಲಿಸದೇ ನಿಂತುಬಿಟ್ಟಿತು. ನಂತರ ನಿಧಾನವಾಗಿ ಚಲಿಸತೊಡಗಿತು. ಈ ಬಾರಿ ಅದರ ಚಲನೆಯು ನೇರವಾಗಿರದೇ ಪಾರ್ಶ್ವದಿಂದ ನಡೆಯಲು ಶುರುಮಾಡಿತು. ಇದು ವಿದ್ಯಾರ್ಥಿಗಳಲ್ಲಿ ಅಚ್ಚರಿ ಹುಟ್ಟಿಸಿತು. ಇದನ್ನೆಲ್ಲಾ ನೋಡುತ್ತಿದ್ದ ಸ್ವಾತಿ "ಮೇಡಂ, ಏಡಿ ಏಕೆ ಪಾಶ್ವದಿಂದ ಚಲಿಸುತ್ತದೆ?" ಎಂದಳು. ಶಿಕ್ಷಕಿಯು ಎಲ್ಲರನ್ನೂ ಗುಂಪು ನಿಲ್ಲಿಸಿಕೊಂಡು ಏಡಿಯ ಚಲನೆಯ ಬಗ್ಗೆ ವಿವರಿಸಿದರು.

ಏಡಿಗಳು ವಿಶಿಷ್ಟವಾದ ಅಂಗರಚನಾಶಾಸ್ತ್ರವನ್ನು ಹೊಂದಿದ್ದು, ಅವುಗಳು ಚಪ್ಪಟೆಯಾದ ದೇಹ ಮತ್ತು ಜಂಟಿ ಕಾಲುಗಳ ಗುಂಪನ್ನು ಒಳಗೊಂಡಿವೆ. ಜಂಟಿ ಕಾಲುಗಳು ಯಾವುದೇ ದಿಕ್ಕಿನಲ್ಲಿ ತ್ವರಿತವಾಗಿ ಚಲಿಸಲು ಅನುವು ಮಾಡಿಕೊಡುತ್ತದೆ. ಏಡಿಗಳು ಪಾರ್ಶ್ವದಿಂದ ಚಲಿಸುವುದರಿಂದ ಮಣ್ಣಿನ ಮೇಲೆ ಗಟ್ಟಿಯಾಗಿ ಕಾಲುಗಳನ್ನು ಊರಲು ಮತ್ತು ಸುಲಭವಾಗಿ ಚಲಿಸಲು ಸಹಾಯಕವಾಗುತ್ತದೆ. ಪಾರ್ಶ್ವದ ಚಲನೆಯು ಕಿರಿದಾದ ಸ್ಥಳಗಳಲ್ಲಿ ಮತ್ತು ಬಿರುಕುಗಳ ಮೂಲಕ ಸುಲಭವಾಗಿ ಚಲಿಸುವಂತೆ ಮಾಡಲು ಸಹಕಾರಿಯಾಗಿದೆ. ತಮ್ಮ ನಿಗದಿತ ಸ್ಥಳಗಳನ್ನು ಹುಡುಕಲು ಮತ್ತು ಆಪತ್ತಿನಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಪಾರ್ಶ್ವದಿಂದ ಚಲಿಸುತ್ತವೆ. ವೈರಿಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಸಹ ಏಡಿಗಳು ಪಾರ್ಶ್ವದಿಂದ ಚಲಿಸುತ್ತವೆ.



ಏಡಿಗಳು ಪಾರ್ಶ್ವದಿಂದ ಚಲಿಸಲು ಅವುಗಳ ಅಂಗರಚನಾಶಾಸ್ತ್ರವು ಸಹ ಕಾರಣವಾಗಿದೆ. ಅವುಗಳ ಕಾಲುಗಳು ದೇಹದ ಬದಿಗಳಿಗೆ ಜೋಡಿಸಲ್ಪಟ್ಟಿರುತ್ತವೆ. ಇದರಿಂದ ಏಡಿಗಳು ಸುಲಭವಾಗಿ ಪಾರ್ಶ್ವವಾಗಿ ಚಲಿಸುತ್ತವೆ. ಅವುಗಳ ಕಾಲುಗಳು ಮುಂದಕ್ಕೆ ಅಥವಾ ಹಿಂದಕ್ಕೆ ಚಲಿಸುವುದಕ್ಕಿಂತ ಹೆಚ್ಚು ನೈಸರ್ಗಿಕವಾಗಿ ಮತ್ತು ಪರಿಣಾಮಕಾರಿಯಾಗಿ ಪಾರ್ಶ್ವದ ಚಲನೆಗೆ ಸಹಕರಿಸುತ್ತವೆ. ಏಡಿಗಳ ಪಾರ್ಶ್ವದ ಚಲನೆಯು ವಿಕಸನೀಯ ರೂಪಾಂತರವಾಗಿದೆ ಎಂದು ಭಾವಿಸಲಾಗಿದೆ. ಅದು ಲಕ್ಷಾಂತರ ವರ್ಷಗಳಿಂದ ಅವುಗಳ ಆವಾಸಸ್ಥಾನಗಳಲ್ಲಿ ಬದುಕಲು ಮತ್ತು ಅಭಿವೃದ್ಧಿ ಹೊಂದಲು ಸಹಾಯ ಮಾಡಿದೆ.

### ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

### ಏರಿದವನು ಚಿಕ್ಕವನಿರಲೇಬೇಕು

# ಕಣ್ಣಿಗೆ ಕಾಣುವ ಏಕೈಕ ಭಗವಂತ

ಬಾಲಿವುಡ್ ನ ಪ್ರಖ್ಯಾತ ನಟ ಅಮಿತಾಬ್ ಬಚ್ಚನ್ ತಮ್ಮ ಜೀವನದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಂಡಿದ್ದು ಹೀಗೆ.

ಅವು ನನ್ನ ವೃತ್ತಿ ಜೀವನದ ಯಶಸ್ಸಿನ ದಿನಗಳು. ಒಂದು ಬಾರಿ ಶೂಟಿಂಗ್ ಮುಗಿಸಿ ನಾನು ವಿಮಾನದಲ್ಲಿ ಮುಂಬೈಗೆ ಮರಳುತ್ತಿದ್ದೆ. ನನ್ನ ಪಕ್ಕದ ಸೀಟಿನಲ್ಲಿ ಮಧ್ಯಮ ವರ್ಗದ ಒಳ್ಳೆಯ ವಿದ್ಯಾವಂತನಂತೆ ತೋರುತ್ತಿದ್ದ ವ್ಯಕ್ತಿ ಕುಳಿತಿದ್ದು, ಅತ್ಯಂತ ಸರಳವಾಗಿ ತೋರುತ್ತಿದ್ದ ಆತ ಕೇವಲ ಪ್ಯಾಂಟ್ ಮತ್ತು ಶರ್ಟ್ ಧರಿಸಿದ್ದನು. ಆ ವ್ಯಕ್ತಿ ಗಂಭೀರವಾಗಿ ತನ್ನ ಪಾಡಿಗೆ ತಾನು ಓದುತ್ತಾ ಕುಳಿತಿದ್ದರು .

ನಾನು ವಿಮಾನ ಏರುತ್ತಲೇ ನನ್ನನ್ನು ಸಹ ಪ್ರಯಾಣಿಕರು ಗುರುತಿಸಿದ್ದಲ್ಲದೇ ಉದ್ವೇಗದಿಂದ ಕೈ ಬೀಸಿದ್ದರು. ಆದರೆ ನನ್ನ ಪಕ್ಕದಲ್ಲಿ ಕುಳಿತ ಆ ವ್ಯಕ್ತಿ ಕಿಟಕಿಯಿಂದ ಹೊರಗೆ ನೋಡುತ್ತಲೋ, ಗಗನಸಖಿ ತಂದುಕೊಟ್ಟ ಚಹಾ ಸೇವಿಸುತ್ತಾ ಪೇಪರ್ ಓದುತ್ತ ಕುಳಿತಿದ್ದರು.

ನಾನು ಅವರತ್ತ ಹೊರಳಿ ಮುಗುಳ್ನಗೆ ಬೀರುತ್ತಾ ಹಾಯ್ ಎಂದಾಗ ಆ ವ್ಯಕ್ತಿ ಹಲೋ ಎಂದು ಚಂದದ ಮುಗುಳ್ನಗೆ ಬೀರಿದರು. ಹಾಗೆಯೇ ನಮ್ಮ ಮಾತುಕತೆ ಶುರುವಾಗಿ ನಾನು ಚಲನಚಿತ್ರದ ವಿಷಯವನ್ನು ನಮ್ಮ ಮಾತಿನ ವಸ್ತುವಾಗಿಸುವ ಉದ್ದೇಶದಿಂದ ನೀವು ಸಿನಿಮಾ ನೋಡುತ್ತೀರಾ ಎಂದು ಕೇಳಿದೆ. ಆಗ ಆ ವ್ಯಕ್ತಿ ತುಂಬಾ ಕಡಿಮೆ, ಕೆಲವು ವರ್ಷಗಳ ಹಿಂದೆ ಒಂದು ಚಿತ್ರವನ್ನು ನೋಡಿದ್ದೆ ಎಂದು ಪ್ರಾಮಾಣಿಕವಾಗಿ ಉತ್ತರಿಸಿದರು. ಕೂಡಲೇ ನಾನು ಚಿತ್ರೋದ್ಯಮದಲ್ಲಿ ಕೆಲಸ ಮಾಡುತ್ತೇನೆ ಎಂದು ಹೇಳಿದೆ.

ಓ ಹೌದಾ ಚಿತ್ರೋದ್ಯಮದಲ್ಲಿ ನೀವು ಯಾವ ಕೆಲಸವನ್ನು ನಿರ್ವಹಿಸುತ್ತೀರಿ ಎಂದು ಕುತೂಹಲದಿಂದ ಅವರು ಕೇಳಿದರು. ನಾನೊಬ್ಬ ನಟ ಎಂದು ಉತ್ತರಿಸಿದೆ.


ಓ! ಹೌದೇ? ನೀವು ನಿಮ್ಮ ಕೆಲಸವನ್ನು ತುಂಬಾ ಚೆನ್ನಾಗಿ ಎಂಜಾಯ್ ಮಾಡುತ್ತೀರಲ್ಲವೇ ಎಂದು ಕೇಳಿದರು. ವಿಮಾನ ಮುಂಬೈಗೆ ಬಂದಿಳಿದಾಗ ನಾನು ಅವರ ಕೈಕುಲುಕಿ ನಿಮ್ಮ ಜೊತೆ ಪ್ರಯಾಣ ಸಂತಸಕರವಾಗಿತ್ತು, ಅಂದ ಹಾಗೆ ನನ್ನ ಹೆಸರು ಅಮಿತಾಬ್ ಬಚ್ಚನ್ ಎಂದು ಹೇಳಿದೆ.

ಆತ್ಮೀಯತೆಯಿಂದ ನನ್ನ ಕೈ ಬೆಸೆದ ಆ ವ್ಯಕ್ತಿ ಧನ್ಯವಾದಗಳು! ನಿಮ್ಮನ್ನು ಭೇಟಿಯಾಗಿ ನನಗೂ ಸಂತೋಷವಾಗಿದೆ. ನಾನು ಜೆ ಆರ್ ಡಿ ಟಾಟಾ ಎಂದು ಹೇಳಿದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ





ಭಾರತ ದೇಶದ ಉದ್ಯಮ ಸಾಮ್ರಾಜ್ಯದ ಚಕ್ರವರ್ತಿ, ಸ್ವತಂತ್ರ ಭಾರತದಲ್ಲಿ ಉದ್ದಿಮೆಗಳ ಮೂಲಕ ಜನರ ಆರ್ಥಿಕ ಬದುಕನ್ನು ಕಟ್ಟಿಕೊಟ್ಟ ಸಾವಿರಾರು ಕೋಟಿ ರೂಗಳ ಮಾಲೀಕ, ಟಾಟಾ ಹೆಸರಿನ ನೂರಾರು ಕಂಪನಿಗಳನ್ನು, ಸಮಾಜ ಸೇವಾ ಸಂಸ್ಥೆಗಳನ್ನು, ಆಸ್ಪತ್ರೆಗಳನ್ನು ನಡೆಸುತ್ತಿರುವ ಆ ಘನಿಷ್ಠ ವ್ಯಕ್ತಿಯ ಸರಳತೆ ನನ್ನನ್ನು ಮಂತ್ರಮುಗ್ಧನನ್ನಾಗಿಸಿತು.

ಅಂದು ನಾನು ಆ ವ್ಯಕ್ತಿಯಿಂದ "ನಿನ್ನನ್ನು ನೀನು ಅದೆಷ್ಟೇ ದೊಡ್ಡವನೆಂದು ಭಾವಿಸಿದರೂ ನಿನಗಿಂತ ದೊಡ್ಡ ಮಹಾನುಭಾವರು ಇದ್ದೇ ಇರುತ್ತಾರೆ"

ವಿನಯವಂತರಾಗಿರಿ... ಹಾಗಿರಲು ಯಾವುದೇ ಬೆಲೆ ತೆರಬೇಕಾಗಿಲ್ಲ ಎಂಬ ಪಾಠವನ್ನು ಹೇಳಿಸಿಕೊಳ್ಳದೆಯೇ ಕಲಿತೆ ಎಂದು ಬರೆದು ಕೊಂಡಿದ್ದಾರೆ.

ಈ ಕಥೆ ಓದಿದೊಡನೆ ಮನದೊಳಗೆ ಮೂಡಿದ್ದು ನಾವು ಪ್ರಾಥಮಿಕ ಶಾಲೆಯಲ್ಲಿ ಇದ್ದಾಗ ನಮ್ಮ ಕನ್ನಡ ಪಠ್ಯದಲ್ಲಿ ಓದುತ್ತಿದ್ದ ಪಂಜೆ ಮಂಗೇಶರಾಯರ ಪದ್ಯ ಏರುವನು ರವಿ ಏರುವನು ಬಾನೊಳು ಸಣ್ಣಗೆ ತೋರುವನು. ಏರಿದವನು ಚಿಕ್ಕವನಿರಬೇಕೆಲೆ ಎಂಬ ಮಾತನು ಸಾರುವನು

ನಿಜ ಅಲ್ಲವೇ ಸ್ನೇಹಿತರೆ, ಇಡೀ ಜಗತ್ತಿನ ಜೀವಸಂಕುಲಕ್ಕೆ ನೆಲೆಯಾಗಿರುವ ಆ ಸೂರ್ಯನಿಗೆ ಯಾವುದೇ ಹಮ್ಮು ಬಿಮ್ಮುಗಳಿಲ್ಲ, ಬೇಸಿಗೆಯಿರಲಿ, ಮಳೆಯೇ ಇರಲಿ ಕಡು ಚಳಿಯಿರಲಿ ಎಂದೂ ತಪ್ಪದೇ ತನ್ನ ಕರ್ತವ್ಯವನ್ನು ಮಾಡುವ ಸೂರ್ಯ "ಅದೆಷ್ಟು ಬಿಸಿಲಪ್ಪ ಎಂದು ಬೈದರೆ ಕುಗ್ಗುವುದಿಲ್ಲ, ಹಿತವಾದ ಬಿಸಿಲು ಎಂದು ಹೊಗಳಿದರೆ ಹಿಗ್ಗುವುದಿಲ್ಲ... ಯಾರ ಹೊಗಳಿಕೆ ತೆಗಳಿಕೆಗಳಿಗೂ ಪ್ರತಿಕ್ರಿಯಿಸದೇ ತನ್ನ ಪಾಡಿಗೆ ತನ್ನ ಕೆಲಸ ನಿರ್ವಹಿಸುವ ಸೂರ್ಯ ಸಮಯಪ್ರಜ್ಞೆಗೆ ಮತ್ತೊಂದು ಹೆಸರು.

ಸೌರವ್ಯೂಹದಲ್ಲಿ ಸೂರ್ಯ ಒಂದು ಬೃಹತ್ ಆಕಾಶಕಾಯ ಎಂಬ ಅರಿವಿದ್ದೂ ಕೂಡ ನಮ್ಮ ಪೂರ್ವಜರಂತೆ ಇಂದಿಗೂ ಕೂಡ ನಾವು ಸೂರ್ಯನನ್ನು ಪೂಜಿಸಲು ಕಾರಣ ಆತನಿಂದಲೇ ನಮ್ಮ ಹಗಲು, ಆತನಿಂದಲೇ ನಮ್ಮ ಬದುಕು, ಆತನಿಂದಲೇ ನಮ್ಮ ಅಸ್ತಿತ್ವ. ಬಹುಶಹ ಕಣ್ಣಿಗೆ ಕಾಣುವ ಏಕೈಕ ಭಗವಂತ ಸೂರ್ಯದೇವ ಎಂದರೆ ತಪ್ಪಿಲ್ಲ. ದೊಡ್ಡವರು ಯಾವಾಗಲೂ ವಿನಯವಂತರಾಗಿರಬೇಕು ಎಂಬುದಕ್ಕೆ ಸೂರ್ಯನಿಗಿಂತ ಮಿಗಿಲಾದ ಉದಾಹರಣೆ ಇಲ್ಲ. ನಮ್ಮ ನಿಮ್ಮೆಲ್ಲರ ಬದುಕಿನಲ್ಲಿ ಬಂದು ಹೋಗುವ ಅಂತಹ ಅನೇಕ ಮಹಾನುಭಾವರ ವಿನಯವಂತಿಕೆಯನ್ನು ಗೌರವಿಸುತ್ತಾ ನಾವು ಕೂಡ ಆ ವಿನಯವಂತಿಕೆಯನ್ನು ರೂಢಿಸಿಕೊಳ್ಳೋಣ.

# ಕಾಗದದ ದೋಣಿ

**ಕಾಗದದ ದೋಣಿಯಲ್ಲಿ ನಾ ಕೂರುವಂತ ಹೊತ್ತಾಯಿತೇ**
**ಕಾಣಿಸದ ಹನಿಯೊಂದು ಕಣ್ಣಲ್ಲೇ ಕೂತು ಮುತ್ತಾಯಿತೇ**

ಕಾಗದ ದೋಣಿ ಎಂದೊಡನೆ ನೆನಪಾಗುವುದು ಬಾಲ್ಯದ ಸವಿ ನೆನಪು. ನಾನು ಕಳೆದ ಬಾಲ್ಯದ ದಿನಗಳು ಅವಿಸ್ಮರಣೀಯ .ನನ್ನ ಊರು ಮಲೆನಾಡಿನ ಒಂದು ಪುಟ್ಟ ಹಳ್ಳಿ, ಮಲೆನಾಡು ಮಳೆಗೆ ಪ್ರಸಿದ್ಧಿ. ಆಷಾಢ ಮಾಸದಲ್ಲಿ ಎಡಬಿಡದೆ ಧೋ ಎಂದು ಪುನರ್ವಸು ಮಳೆ ಸುರಿದಾಗ ಆ ಮಳೆ ಗಾಳಿಯ ರಭಸಕ್ಕೆ ರಸ್ತೆಗಳೆಲ್ಲ ನದಿಯ ತರಹ ಭಾಸವಾಗುತ್ತಿತ್ತು . ಮಳೆಯ ರೋಷ ನಿಲ್ಲುವರೆಗೂ ನಮಗೆ ಶಾಲೆಗೆ ರಜೆ ಇರುತ್ತಿತ್ತು.

ಮಕ್ಕಳಿಗೂ ನೀರಿಗೂ ಒಂದು ತೆರನಾದ ನಂಟು, ನದಿ ಸರೋವರ ಸಮುದ್ರ ಕಂಡೊಡನೆ ಮಕ್ಕಳ ಕಾಲು ಭೂಮಿಯ ಮೇಲೆ ನಿಲ್ಲುವುದೇ ಇಲ್ಲ ಅವರನ್ನು ಹಿಡಿಯುವುದೇ ಒಂದು ಹರಸಾಹಸ .ಇನ್ನು ದೋಣಿ ವಿಹಾರಕ್ಕೆ ಎಂದು ಕರೆದುಕೊಂಡು ಹೋದರೆ ಅವರ ಉತ್ಸಾಹ ಇಮ್ಮಡಿಯಾಗುತ್ತದೆ . ದೋಣಿಯು ಸಾಗುವಾಗ ಕೈಗಳನ್ನು ನೀರಿನಲ್ಲಿ ಇಳಿಬಿಟ್ಟು ಸಂಭ್ರಮಿಸುತ್ತಾರೆ.


ನಮಗಂತೂ ಮಳೆಗಾಲ ಬಂದೊಡನೆ ಆಗುವ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ. ಮನೆಯ ಹೆಂಚಿನ ಕೆಳಗೆ ಬೀಳುವ ನೀರಿನಲ್ಲಿ ಆಟವಾಡುವುದು ಬಣ್ಣಬಣ್ಣದ ಕಾಗದದಲ್ಲಿ ದೋಣಿಯನ್ನು ಮಾಡಿ ಮನೆಯ ಅಂಗಳದಲ್ಲಿ ತೋಟದ ಕಾಲುವೆಗಳಲ್ಲಿ ಎಲ್ಲಾದರೂ ಸರಿ ,ನೀರು ಹೋಗುವ ದಾರಿಯಲ್ಲಿ ಕಾಗದದ ದೋಣಿಯನ್ನು ಬಿಟ್ಟು ಸಂಭ್ರಮಿಸುತ್ತಿದ್ದೆವು. ಅದು ನೀರಿನಲ್ಲಿ ತೇಲುತ್ತಾ ನೃತ್ಯ ಮಾಡುತ್ತಾ ಹೋಗುವುದನ್ನು ನೋಡುವುದೆಂದರೆನಮಗೆಎಲ್ಲಿಲ್ಲದಖುಷಿ.ಒಡಹುಟ್ಟಿದವರೊಂದಿಗೆ ಮತ್ತು ಸ್ನೇಹಿತರೊಂದಿಗೆ ಸೇರಿ ಕಾಗದದ ದೋಣಿಯ ಸ್ಪರ್ಧೆಯನ್ನು ಮಾಡುತ್ತಿದ್ದೆವು. ಯಾರ ದೋಣಿ ಹೆಚ್ಚು ದೂರ ಹೋಗುತ್ತದೆ ಎಂದು ಪಂಥ ಕಟ್ಟಿ ಕುಣಿದಾಡುತ್ತಿದ್ದೆವು.

ನೋಡುತ್ತಾ ಹೋದರೆ ಈ ಕಾಗದ ದೋಣಿಯ ಆಟದಲ್ಲಿ ಒಂದು ಅದ್ಭುತವಾದ ಜೀವನದ ಸಂದೇಶ ಕೂಡ ಇದೆ.ನೀರಿನಲ್ಲಿ ಬಿಟ್ಟ ಕಾಗದದ ದೋಣಿಗಳಲ್ಲಿ ಕೆಲವು ದೋಣಿಗಳು ತೇಲುತ್ತಾ ಮುಂದೆ ಸಾಗುತ್ತವೆ. ಕೆಲವು ಸ್ವಲ್ಪ ದೂರ ಸಾಗಿ ಅಲ್ಲಿಯೇ ನಿಂತುಬಿಡುತ್ತದೆ. ಇನ್ನು ಕೆಲವು ಇನ್ನೇನು ಮುಳುಗಿತು ಎಂದು ಅಂದು ಕೊಳ್ಳುವಷ್ಟರಲ್ಲಿ ಮತ್ತೆ ಎದ್ದು ನಿಲ್ಲುತ್ತದೆ ಹಾಗೆಯೇ



ಚೇತನ ಭಾರ್ಗವ
ಲೇಖಕಿ, ಬೆಂಗಳೂರು

Hampi Times E-paper
SCAN AND READ



ಕೆಲವೊಂದು ಕಾಗದ ದೋಣಿಗಳು ಸ್ವಲ್ಪ ದೂರವೂ ಸಾಗದೆ ಸಂಪೂರ್ಣ ಒದ್ದೆಯಾಗಿ ಮುಳುಗಿ ಹೋಗುತ್ತದೆ. ಕಾಗದ ದೋಣಿಯಂತೆ ನಮ್ಮ ಜೀವನದಲ್ಲಿ ನಾವಂದುಕೊಂಡಿದ್ದೆಲ್ಲ ನಡೆಯುವುದಿಲ್ಲ . ಕೆಲವು ಸಂಗತಿಗಳು ನಾವಂದುಕೊಂಡಂತೆ ನಡೆದರೆ ಕೆಲವು ನಮಗೆ ಪ್ರತಿಕೂಲವಾಗಿ ಪರಿಣಮಿಸುತ್ತದೆ. ಆದರೆ ಇದರ ಅರ್ಥ ನಾವು ನಮ್ಮ ಪ್ರಯತ್ನ ವಿಶ್ವಾಸ ಬಿಡದೆ ಮುಂದುವರಿಯಬೇಕು. ನಮ್ಮ ಎಣಿಕೆಯಂತೆ ನಡೆಯಲಿಲ್ಲ ಎಂದು ಹತಾಶರಾಗದೆ ಕುಗ್ಗದೆ ಹಾಗೆಯೇ ಗೆಲುವು ಬಂದಾಗ ಬೀಗದೆ ಅಹಂಕಾರ ಪಡದೆ ಸಮಚಿತ್ತದಿಂದ ಜೀವನ ನಡೆಸಬೇಕು .ನಮ್ಮ ಜೀವನದ ಪಯಣ ಕೂಡ ಕಾಗದದ ದೋಣಿಯಂತೆಯೇ ಸಾಗುತ್ತಲೇ ಇರಬೇಕು .ಪರಿಣಾಮವೇನೇ ಆಗಲಿ ನಾವು ಎಂದಿಗೂ ಭಯಪಟ್ಟು ಹತಾಶರಾಗಿ ಮುಂದೆ ಸಾಗುವುದನ್ನು ಕೈ ಬಿಡಬಾರದು. ಇದೇ ಕಾಗದ ದೋಣಿಯು ನಮಗೆ ಕಲಿಸುವ ಪಾಠವಾಗಿದೆ.

ನಾವೆಲ್ಲ ಕಳೆದ ಬಾಲ್ಯ ಕಾಗದ ದೋಣಿಯೊಂದಿಗೆ ಆಡಿದ ಆಟ ನನ್ನ ಮಕ್ಕಳಿಗೆ ಇಂದಿನ ಪರಿಸ್ಥಿತಿಯಲ್ಲಿ ಸಿಗುತ್ತಿಲ್ಲವಲ್ಲ ಎಂದು ಮನವು ಬೇಸರಿಸುತ್ತದೆ. ಆದರೆ ಮಳೆ ಬಂದಾಗೆಲ್ಲ ನನ್ನ ಮನವು ಕೂಡ ನನ್ನ ಮಕ್ಕಳೊಂದಿಗೆ ತಾನು ಮಗುವಾಗಿ ಕಾಗದ ದೋಣಿ ಆಟ ಆಡೋಣ ಎಂದು ಹಾತೊರೆಯುತ್ತದೆ .ಮತ್ತೆ ಮತ್ತೆ ಮಲೆನಾಡಿನ ಆ ಮಳೆ ಮನವನ್ನು ಕಾಗದದ ದೋಣಿ ಆಟಕ್ಕೆ ಕರೆದೊಯ್ಯುತ್ತದೆ.

ಕವಿ ಮನಸು

## ಮಂಜಿನ ಒಲವ ದಿಬ್ಬಣ



ಸವಿಯಾದ ಮುಂಜಾನೆಯಲ್ಲಿ
ಹೊರಟಿದೆ ಮಂಜಿನ ಒಲವ ದಿಬ್ಬಣ
ಸಮಯವು ಮಂಜಿನ ಮನದೊಳಗೆ
ಕಣ್ಣುಮುಚ್ಚಾಲೆ ಆಡುತ್ತಿದೆ ಪ್ರತಿಕ್ಷಣ//

ಗಿಡಮರಗಳು ಹಾಲಿನ ಅಭಿಷೇಕದಿಂದ
ತೊಯ್ದಂತಿದ್ದು ನಗುವನ್ನು ತೋರುತ್ತಿದೆ
ಇಬ್ಬನಿಯು ಮಳೆ ಹನಿಯಂತೆ ನೇಸರನಿಗೆ
ಸ್ವಾಗತವನ್ನು ಖುಷಿಯಿಂದ ಕೋರುತ್ತಿದೆ//

ನೇಸರನಿಗೂ ಮಂಜು ಮುತ್ತಿಕ್ಕುತ್ತಾ
ಭೂಮಿಯನ್ನು ತಂಪಾಗಿಸಿ ಬಿಟ್ಟಿತು
ಮಂಜು ಮುತ್ತಿಕ್ಕಿದ ಖುಷಿಯಲ್ಲಿ ನೇಸರನಿಂದ
ಭೂಮಿಯೊಡಲು ಫಳ ಫಳ ಬೆಳಗಿತು//

ಆಹಾ ಮಂಜಿನ ಆ ಚೆಲುವ ತೋರಣ
ಮುಂಜಾನೆಗೆ ತಂದಿತು ಹೊಸ ಮೆರುಗು
ಎಲ್ಲರ ಮನಸ್ಸಿಗೆ ಸಂತೋಷ ನೀಡುತ್ತಾ
ದೂರವಾಗಿಸಿತು ನಮ್ಮೆಲ್ಲರ ಕೊರಗು//

ತಿರುಗುತ್ತಿರುವ ಕಾಲ ಚಕ್ರದೆದುರು
ನಮ್ಮದೇನು ನಡೆಯದು ಮುಂದು
ದೇವರು ಸೃಷ್ಟಿಸಿದ ಈ ಜಗದಲ್ಲೆಂದಿಗೂ
ಅಹಂ ತೋರದೆ ನಾವೆಲ್ಲರಾಗುವ ಒಂದು//

**– ಸವಿತಾ ಸತೀಶ್ ಶೆಟ್ಟಿ {ಸವಿಸತಿ}**
ದಕ್ಷಿಣ ಕನ್ನಡ

## ವಿಧಿಗೇಕೆ ಕೋಪ?


ಚಿತ್ರ ಕೃಪೆ ವಾಟ್ಸಾಪ್

ತಂದೆಯ ಅಗಲಿಕೆ ತಂದಿತು ಸಂಕಟ
ಹರಿಸಿತು ಬಳಗದಿ ಕಣ್ಣೀರಾ
ಉದರದ ಪೋಷಣೆ ತಾಯಿಯ ಹೆಗಲಿಗೆ
ಬಡತನದಲ್ಲಿದೆ ಸಂಸಾರ

ಅನುದಿನ ಮೊಗ್ಗನು ಆರಿಸಿ ತರುವಳು
ಮಲ್ಲಿಗೆ ಮಾಲೆಯ ಹೆಣೆಯುವಳು
ಪಟ್ಟಣಕೊಯ್ಯುತ ಮಾರಲು ಮಾಲೆಯ
ಕಂದನ ಕರದಲಿ ನೀಡುವಳು

ದೇವರ ಪೂಜೆಗೆ, ನಾರಿಯ ತುರುಬಿಗೆ
ಉದಯದಿ ಹೂವನು ಬಯಸುವರು
ಕೊಳ್ಳುವ ಮಂದಿಯು ಬೆಳಗಿನ ವೇಳೆಗೆ
ಉತ್ಸುಕರಾಗಿಯೆ ಕೊಳ್ಳುವರು

ಚಳಿಯಲಿ ಬೆಚ್ಚಗೆ ಹೊದಿಕೆಯ ಒಳಗಡೆ
ನಿದ್ರೆಯಲಿರುತಿರೆ ಎಳೆ ಕಂದ
ಅಮ್ಮನು ಕರೆದಿರೆ ಅರೆಬರೆ ಎಚ್ಚರ
ಹೊರಟನು ತಕ್ಷಣ ಮನೆಯಿಂದ

ಕುಳಿತಿಹ ಕಡೆಯಲೆ ನಿದ್ರೆಗೆ ಜಾರಿದ
ನೋಡಲು ಬರುತಿದೆ ಅನುಕಂಪ
ಓದುವ ವಯಸಿನ ಬಾಲನ ಬಾಳಲಿ
ಆ ವಿಧಿಗೇತಕೆ ಈ ಕೋಪ?

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

**ಎಸ್ ಎಸ್ ಎಲ್ ಸಿ ಮಾರ್ಗದರ್ಶಿಗಾರಿ ಕೆಳಗಿನ ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿರಿ**

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join for to Get Daily E-paper


# ಹೋಮಿಯೋಪತಿ - ಪರಮಾಣುಗಳ ಆಚೆಗಿನ ವಿಜ್ಞಾನ

ಹೋಮಿಯೋಪತಿಯು ತಾತ್ವಿಕವಾಗಿ ಹಾಗು ತಾಂತ್ರಿಕವಾಗಿ ಆಳವಾದ ವೈದ್ಯಕೀಯ ಶಾಖೆ. ಹೋಮಿಯೋಪತಿ ಹೊಂದಿರುವ ಮಾನವನ ಆರೋಗ್ಯದ ಬಗ್ಗೆ ಅತ್ಯಂತ ದೂರದೃಷ್ಟಿಯುಳ್ಳ ಪರಿಕಲ್ಪನೆಗಳು, ಜೀವನ, ರೋಗ ಮತ್ತು ಮರಣದ ಬಗೆಗಿನ ಆಳವಾದ ತತ್ವಗಳು ಮತ್ತು ಸರಳವಾದ ಚಿಕಿತ್ಸಾ ವಿಧಾನಗಳು ಬೇರೆ ಯಾವ ವೈದ್ಯಪದ್ಧತಿಯಲ್ಲೂ ಇರದ ತರ್ಕ ಮತ್ತು ತತ್ವಗಳನ್ನು ಹೊಂದಿದೆ. ಆದರೂ ಹೋಮಿಯೋಪತಿ ಪದ್ಧತಿ ಆಗಾಗ್ಗೆ ವೈಜ್ಞಾನಿಕ ಸಮುದಾಯದಿಂದ ಟೀಕಿಸಲ್ಪಟ್ಟಿದೆ ಮತ್ತು ಅಪಹಾಸ್ಯಕ್ಕೊಳಗಾಗಿದೆ. ಹೋಮಿಯೋಪತಿ ಚಿಕಿತ್ಸೆಗಳ ಪರಿಕಲ್ಪನೆಗಳನ್ನು 'ಹುಸಿ-ವಿಜ್ಞಾನ' (pseudoscience) ಎಂದೂ ಮತ್ತು ಔಷಧಿಗಳ ಪರಿಣಾಮಗಳನ್ನು ಕೇವಲ Placebo Effect (ಕೇವಲ ನಂಬಿಕೆಯಿಂದ ಉಂಟಾಗುವ ತಾತ್ಕಾಲಿಕ ಬದಲಾವಣೆ) ಎಂದು ಕೆಲ ಅರೆಬೆಂದ ಬೌದ್ಧಿಕತೆಯ ವಿಜ್ಞಾನಿಗಳು ಟೀಕಿಸುತ್ತಲೇ ಬಂದಿದ್ದಾರೆ.

ಇಂದಿನ ಸಮಾಜದಲ್ಲಿ ವಿಜ್ಞಾನ ತನ್ನ ಬಾಹುಗಳನ್ನು ವಿಸ್ತರಿಸುತ್ತಲೇ ಆ ಕ್ಷೇತ್ರದ ದ್ವಾರಪಾಲಕರ ಸಂಖ್ಯೆಯೂ ದ್ವಿಗುಣಗೊಂಡಿದೆ. ತಮ್ಮ ಸಂಕುಚಿತ ಮನೋಭಾವದ ಗೊರಸುಗಳಿಗೆ ಬಂಧಿಸಲ್ಪಟ್ಟಿರುವ ಈ ದ್ವಾರಪಾಲಕರು ವಿಜ್ಞಾನದ ಅಘಾದತೆಯನ್ನು ನಿರ್ಲಕ್ಷ್ಯಸಿಸುತ್ತಾ ತಮ್ಮದೇ ಆದ ಮೊಂಡುವಾದಗಳಿಂದ ಬಂಧಿಸಲ್ಪಟ್ಟು ಹೊಸ ಅನ್ವೇಷಣೆಗಳಿಗೆ ಕುರುಡಾಗಿದ್ದರೆ. ಅವರ ಸಂಕುಚಿತ ಪರಿಮಿತಿಯಲ್ಲಿ ಹೊಂದಿಕೆಯಾಗದ ಯಾವುದೇ ಪರಿಕಲ್ಪನೆಯನ್ನು ತಿರಸ್ಕರಿಸುತ್ತಾ ಅಜ್ಞಾನದ ಬಾವಿಯಲ್ಲಿ ಅನಗತ್ಯ ಸಂಭ್ರಮದಲ್ಲಿ ತೊಡಗಿದ್ದಾರೆ.

ವಾಸಿಯಾದ ಕಾಲೆಯಗಳ ವ್ಯಾಪಕ ದಾಖಲಾತಿಗಳ ಮೂಲಕ ಮತ್ತು ಹೋಮಿಯೋಪತಿಯ ಮೂಲತತ್ವಗಳ ಪ್ರಕಾರ ಚಿಕಿತ್ಸೆ ಪಡೆದು ರೋಗಿಗಳು ಗುಣವಾಗಿರುವ ಸಾವಿರಾರು ಉದಾಹರಣೆಗಳ ನಂತರವೂ ಹೋಮಿಯೋಪತಿ ಔಷಧಿಗಳ ಪ್ರಮಾಣವನ್ನು (quantity) ನಿರೂಪಿಸಲು ವಿಜ್ಞಾನಿಕ ಪ್ರಪಂಚಕ್ಕೆ ಇಲ್ಲಿವರೆಗೂ ಸಾಧ್ಯವಾಗದೆ ಇದ್ದುದರಿಂದ , ಹೋಮಿಯೋಪತಿ ಔಷಧಿಗಳು ನಿಜವಾಗಿಯೂ ಔಷಧಿಗಳು ಹೌದೇ ಅಲ್ಲವೇ ಅನ್ನೋ ಪ್ರಶ್ನೆ ಸಾಮಾನ್ಯವಾಗಿ ಚಾಲ್ತಿಯಲ್ಲಿತ್ತು. ವಿಜ್ಞಾನಿಗಳಿಗೆ ಹೋಮಿಯೋಪತಿ ಬಗ್ಗೆ ಇರುವ ಆಸಕ್ತಿಯ ಕೊರತೆ ಮತ್ತು ವ್ಯಾಪಾರವನ್ನೇ ಬಂಡವಾಳವಾಗಿ ಆಧರಿಸದೆ ಇರೋ ಪದ್ಧತಿಗೆ ಇರೋ ಹಣದ ಅಭಾವದಿಂದಲೂ, ಹೋಮಿಯೋಪತಿ ಔಷಧಿಗಳನ್ನು ಪ್ರಮಾಣೀಕರಿಸುವ ಬಗ್ಗೆ ಆಳವಾದ ಅಧ್ಯನ ಇಲ್ಲಿವರೆಗೆ ನಡೆದಿರಲಿಲ್ಲ.

ಅಲೋಪತಿ ಔಷಧಗಳನ್ನು ನಾವು ಪ್ರಮಾಣೀಕರಿಸಬಹುದು. ಅವು 25 ಮಿಗ್ರಾಂ ಮತ್ತು 50 ಮಿಗ್ರಾಂ ಮತ್ತು ಮುಂತಾದ ಸ್ಪಷ್ಟ ಪ್ರಮಾಣದಲ್ಲಿ ಲಭ್ಯವಿವೆ. ಈ ಔಷಧಿಗಳನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿ ಇರಿಸಿ ವೀಕ್ಷಿಸಬಹುದು. ಅವುಗಳ ಕ್ರಿಯೆ ಮತ್ತು ರಾಸಾಯನಿಕ ಗುಣಲಕ್ಷಣಗಳನ್ನು ತಿಳಿಯಲು ಬಯೋಕೆಮಿಸ್ಟ್ರಿ ಪರೀಕ್ಷೆಗಳನ್ನು ಅವುಗಳ ಮೇಲೆ ನಡೆಸಬಹುದು.


ಡಾ.ನಂದೀಶ್ ಬಿ.ಎಂ
ಮೊ: 8317312948
Hampi Times E-paper
SCAN AND READ

ಆದರೆ ಹೋಮಿಯೋಪತಿ ಔಷಧಿಗಳ ತಯಾರಿಕೆ ವಿಭಿನ್ನ ತತ್ವಗಳ ಮೇಲೆ ಆಧಾರಿತವಾಗಿದೆ. ಹೋಮಿಯೋಪತಿ ಔಷಧಗಳು 'ಪೊಟೆನ್ಸಿಸ್' (Potencies) ಎಂದು ಕರೆಯಲ್ಪಡುತ್ತವೆ. Potentisation ಎನ್ನುವ ಅತ್ಯಂತ ವಿಶಿಷ್ಟ ಪ್ರಕ್ರಿಯೆಯೊಂದಿಗೆತಯಾರಿಸಲ್ಪಡುವ ಹೋಮಿಯೋಪತಿ ಔಷಧಿಗಳು ಸಹಜ ಸೂಕ್ಷ್ಮದರ್ಶಕದ ಕಣ್ಣಿಗೆ ಕಾಣುವುದಿಲ್ಲ. ಅಣುವಿನ (Atom) ಮಟ್ಟದಿಂದಲೂ ಅತೀತವಾಗಿ ಸಾಗಿ ಅತಿಸೂಕ್ಷ್ಮ ಪರಮಾಣುಗಳ



ರೂಪದಲ್ಲಿ (subatomic) ಹೋಮಿಯೋಪತಿ ಔಷಧಿಗಳು ತಯಾರಾಗಿರುತ್ತವೆ. ಜಗತ್ತು ಈಗ ತಾನೇ ಅಂಬೆಗಾಲಿಟ್ಟು ಕಲಿಯುತ್ತಿರುವ Nano-Particles ನ ರೂಪದಲ್ಲಿ ಹೋಮಿಯೋಪತಿ ಔಷದಿಗಳಲ್ಲಿನ ಮೂಲ ಧಾತುಗಳು ಇರುತ್ತವೆ.

ಬಹುತೇಕ ವೈಜ್ಞಾನಿಕ ಪ್ರಪಂಚವು ಹೋಮಿಯೋಪತಿ ಯ Potentisation ವಿಧಾನವನ್ನು ಮೂಲವಸ್ತುವನ್ನು ದುರ್ಬಲಗೊಳಿಸುವ (Dilution) ವಿಧಾನವೆಂದು ತಪ್ಪಾಗಿ ಗ್ರಹಿಸಿದ್ದಾರೆ. ಒಂದು ವೈದ್ಯಪದ್ಧತಿ ಔಷಧಿಗಳನ್ನು ಕೇವಲ 'ನೀರಿನಿಂದ ಮಾಡಿದ ಔಷದಿ' ಎಂದು ಸಾರಾಸಗಟಾಗಿ ತಳ್ಳಿಹಾಕುವುದರ ಬದಲಾಗಿ , ಹೋಮಿಯೋಪತಿ ಬಗ್ಗೆ ಆಳವಾಯದ ಅಧ್ಯನ ಮಾಡಿದ್ದರೆ ಈ ಪ್ರಶ್ನೆಯ ಅಗತ್ಯತೆಯೇ ಬರುತ್ತಿರಲಿಲ್ಲ. ಹೋಮಿಯೋಪತಿ ಔಷಧಗಳಲ್ಲಿ ಅಣುಗಳು ಅಥವಾ ಅಣುತಂಡಗಳೆ ಇಲ್ಲ ಎಂದು ತಿರಸ್ಕರಿಸುವ ಮೊದಲು, ಅಣುವಿನ ಆಳಕ್ಕೆ ಹೊಕ್ಕು ಹುಡುಕುವ ಪ್ರಯತ್ನ ಮಾಡಿದ್ದರೆ?

ಆದಾಗ್ಯೂ, 'ಹೋಮಿಯೋಪತಿ ವಿಜ್ಞಾನ' ತನ್ನ ಸಮಯಕ್ಕಿಂತ ಮುಂದಿದೆ ಎಂಬ ತಿಳುವಳಿಕೆ ಇತ್ತೀಚಿನವರೆಗೂ ಈ ಟೀಕಿಸುವ ಸಮುದಾಯಕ್ಕೆ ಇರಲಿಲ್ಲ. ಸೂಕ್ಷ್ಮದರ್ಶಕವನ್ನು ಆವಿಷ್ಕರಿಸುವ ಮೊದಲು ಸ್ಥಾಪಿಸಲಾದ ವಿಜ್ಞಾನ ಮತ್ತು ವಿಧಾನಗಳು ಇಂದಿನ ಮುಂದುವರಿದ ಪರಿಮಾಣಾತ್ಮಕ ವಿಶ್ಲೇಷಣಾತ್ಮಕ ಸಾಧನಗಳೊಂದಿಗೆ ತಮ್ಮ ನಿಖರತೆಯನ್ನು ಕಾಪಾಡಿಕೊಂಡಿರುವುದನ್ನು ನೋಡಿ ಎಲ್ಲರು ಹುಬ್ಬೇರಿಸುತ್ತಿದ್ದಾರೆ. ಹೋಮಿಯೋಪತಿಯ ಆವಿಷ್ಕಾರದ ಎರಡೂವರೆ ಶತಮಾನಗಳ ನಂತರ, ಹೋಮಿಯೋಪತಿಯ ಅಸಲಿತನವು ಸಾಬೀತಾಗಿದೆ.

ರೊಮೇನಿಯಾ ಮತ್ತು ಟರ್ಕಿಯ ವಿಜ್ಞಾನಿಗಳು ಹೋಮಿಯೋಪತಿ ಔಷದಗಳ ಮೇಲೆ ನಡೆಸಿದ ಸಂಶೋಧನೆಯು ಹೋಮಿಯೋಪತಿ ಔಷದಗಳು ಕೇವಲ ನೀರಲ್ಲ ಮತ್ತು ಹೋಮಿಯೋಪತಿ ಚಿಕಿತ್ಸೆಯು ಕೇವಲ 'ಪ್ಲೇಸಿಬೊ ಪರಿಣಾಮ' (Placebo effect) ಅಲ್ಲ ಎಂದು ಜಗತ್ತಿಗೆ ತೋರಿಸಿದೆ.

ಈ ಸಂಶೋಧನೆಯು ಆಧುನಿಕ ತಂತ್ರಜ್ಞಾನಗಳಾದ ಯಂತ್ರ ಕಲಿಕೆ (Machine Learning) ಮತ್ತು ಕ್ರಮಾವಳಿಗಳ (Algorithm Study) ಮೂಲಕ ಔಷಧಗಳನ್ನು ತೀಕ್ಷ್ಣ ಪ್ರಯೋಗಗಳಿಗೆ ಒಳಪಡಿಸಿತ್ತು . ಸಂಕೀರ್ಣ ಪ್ರಕ್ರಿಯೆಗಳು ಮತ್ತು ಅಲ್ಗಾರಿದಮ್ ಅಧ್ಯಯನಗಳ ಮೂಲಕ ಔಷದಗಳನ್ನು ಪರಿಸ್ಕರಿಸಿದಾಗ– ಔಷಧದ ಮೂಲ ವಸ್ತುವು ಅತ್ಯಂತ ಹೆಚ್ಚಿನ ಸಾಮರ್ಥ್ಯದಲ್ಲಿ ಅಂದರೆ ನ್ಯಾನೊಪರ್ಟಿಕಲ್ಸ್ (Nano Particles) ರೂಪದಲ್ಲಿ ಇರುವುದು ಖಾತ್ರಿಯಾಗಿದೆ.

ನ್ಯಾನೊಪರ್ಟಿಕಲ್ಗಳು (Nano Particles) ಪರಮಾಣು ಮಟ್ಟವನ್ನು ಮೀರಿ ಇರುವ ರಚನೆಗಳಾಗಿವೆ. ಹೆಚ್ಚಿನ ಸಾಮರ್ಥ್ಯವುಳ್ಳ ಔಷಧಿಗಳು ತಮ್ಮ ಮೂಲ ಸ್ವಭಾವದಲ್ಲಿ ಹೆಚ್ಚು ಏಕರೂಪವಾಗಿರುತ್ತವೆ ಎಂದು ಪ್ರಯೋಗವು ತೋರಿಸಿದೆ.ಈ ಅದ್ಭುತ ಅಧ್ಯಯನವು ಸಂಪೂರ್ಣ ವೈಜ್ಞಾನಿಕ ಸಮುದಾಯಕ್ಕೆ ಇನ್ನೊಂದು ಏಣಿಯನ್ನು ಹಾಕಿಕೊಟ್ಟು ತನ್ನ ಮಟ್ಟವನ್ನು ಮೀರಿ ಮನುಷ್ಯನ ಆರೋಗ್ಯದ ಸಮಸ್ಯೆಗಳ ಪರಿಹಾರಗಳನ್ನು ಅನ್ವೇಷಿಸಲು ಸಾಗರೋಪಾದಿಯ ಸಾಧ್ಯತೆಗಳನ್ನು ತೆರೆದಿಟ್ಟಿದೆ.

ಈ ಐತಿಹಾಸಿಕ ಸಂಶೋಧನೆ ಹೋಮಿಯೋಪತಿಗೆ ತನ್ನ ರೆಕ್ಕೆಗಳನ್ನು ಮುಕ್ತವಾಗಿ ಹರಡಿ ಟೀಕಾಟಿಪ್ಪಣಿಗಳ ಮೋಡಗಳ ಮೇಲೆ ಸ್ವಚ್ಛಂದವಾಗಿ ಹಾರಲು ವೇದಿಕೆಯನ್ನು ಒದಗಿಸಿದೆ ಸರಿಯಾದ ಧನಸಹಾಯ, ನಿಜವಾದ ಬುದ್ಧಿಮತ್ತೆ, ನಿಗದಿತ ತತ್ವಗಳ ಆಧಾರದ ಮೇಲೆ ಹೋಮಿಯೋಪತಿ ಚಿಕಿತ್ಸೆಯನ್ನು ನೀಡುವ ವೈದ್ಯರ ಕೊಡುಗೆಯಿಂದ ಹೋಮಿಯೋಪತಿ ತನ್ನ ದೈವೀ ಸಹಜ ಸ್ವರೂಪವನ್ನು ಪ್ರಪಂಚಕ್ಕೆ ಪ್ರಸ್ತುತಪಡಿಸಲು ಸಹಾಯ ವಾಗುತ್ತದೆ.

ಸಮರ್ಥ ವಿಜ್ಞಾನಿಗಳ ಸಂಶೋಧನೆಯಿಂದ ಔಷಧೀಯ ಪದಾರ್ಥಗಳನ್ನು ಪ್ರಮಾಣೀಕರಿಸುವ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದರೆ, ಹೋಮಿ ಯೋಪತಿ ಔಷಧಿಗಳ ಸಾಮರ್ಥ್ಯಗಳನ್ನು ಪ್ರಪಂಚದೆದುರು ಇನ್ನೂ ತಿಳಿಯಾಗಿ ತೆರೆದಿಡಲು ದಾರಿ ಸುಗಮವಾಗುತ್ತದೆ. ಹೋಮಿಯೋಪತಿಯ ಆವಿಷ್ಕಾರವಾಗಿ ಒಂದೂವರೆ ಶತಮಾನದ ನಂತರ ಈ ಸೌಮ್ಯವಾದ ಮತ್ತು ಆಳವಾದ ವಿಜ್ಞಾನವು ತನ್ನ ನಿಜವಾದ ಪ್ರಮಾಗಳೊಂದಿಗೆ ಇನ್ನೂ ಹೆಚ್ಚು ಜನರನ್ನು ತಲುಪಿ ಮನುಕುಲದ ವಿಕಾಸಕ್ಕೆ ಹೊಸ ಭರವಸೆಗಳನ್ನು ನೀಡಿದೆ.

# ಮುನಿಸುಕೊಂಡವಳು

ಜಗಳ ಯಾರ ಮನೆಯಲ್ಲಿ ಇಲ್ಲ ಹೇಳಿ ಅದಕ್ಕೆ ಬಲ್ಲವರು ಹೇಳಿದ್ದಾರೆ ಎಲ್ಲರ ಮನೆಯ ದೋಸೆನೂ ತೂತೆ ಎಂದು ಗಂಡ – ಹೆಂಡಿರ ಜಗಳ ಅಣ್ಣ– ತಮ್ಮಂದಿರ ಜಗಳ ಅತ್ತೆ – ಸೊಸೆ ಜಗಳ ಹೀಗೆಲ್ಲಾ ನಾವು ವಿಂಗಡಿಸುತ್ತೇವೆ ಇದೊಂದು ಹೊಸ ಜಗಳ ಮೊಬೈಲ್ ಮ್ಯಾಸೆಜ್ ಜಗಳ ಅರೆ ಇದೇನಿದು ಎಂದು

ಕೂತುಹಲವೇ ಸ್ವಲ್ಪ ತಾಳಿ ಹೇಳುವೆ? ರಜೆಗೆಂದು ನಾನು ಊರಿಗೆ ಹೋಗಿದ್ದೆ ನನಗೆ ಪರಿಚಯವಿರುವ ಸಹೋದರಿಯೊಬ್ಬರು ನನ್ನ ಜೊತೆ ಆತ್ಮೀಯವಾಗಿ ಇದ್ದರೂ ನಾನು ಸಹ ಅವರನ್ನು ನನ್ನ ಒಡಹುಟ್ಟಿದ ಅಕ್ಕನಂತೆ ಎಂದು ನಂಬಿದ್ದೆ ರಾಖಿಯನ್ನು ಕಟ್ಟಿಸಿಕೊಂಡು ಸೋದರತ್ವಕ್ಕೆ ಬೆಲೆ ಏನು ಎಂಬುದನ್ನು ಕಲಿತಿದ್ದೆ ಅದೇಕೋ ನನಗೆ ಗೊತ್ತಿಲ್ಲ ಅಕ್ಕನಿಗೊಂದು ಗುಡ್ ಮಾರ್ನಿಂಗ್ ಗುಡ್ ನೈಟ್ ಹೇಳುತ್ತಿದ್ದೆ ಮೆಸೇಜ್ ಮೂಲಕ ನನ್ನ ಮನದ ವಿಷಯವನ್ನು ತಿಳಿಸಿ ಕೊಟ್ಟಿದ್ದೆ ಬೇಸರದ ಸಂತೋಷದ ಮನದ ಭಾವನೆಗಳನ್ನು ಹೇಳುತ್ತಿದ್ದೆ ಯಾಕೆಂದರೆ ಅವರು ನನಗೆ ಸಮಾಧಾನದ ಮಾತು ಹೇಳಿ ಬದುಕಿಗೊಂದು ಭರವಸೆ ತುಂಬುತ್ತಿದ್ದರು. ಅಂದು ಏನಾಯಿತೋ ಗೊತ್ತಿಲ್ಲ ಅಕ್ಟೋಬರ್ 18 ನೆ ತಾರೀಕು ಆ ದಿವಸ ಬನ್ನಿ ಹಬ್ಬ ನಾಡಿನ ದೊಡ್ಡ ಹಬ್ಬ ಆಚರಣೆ ಇತ್ತು. ನಾನು ಮೆಸೇಜ್ ಮಾಡಿದ್ರು ರಿಪ್ಲೇ ಇರಲಿಲ್ಲ. ಅದಕ್ಕೆ ಸಹಜವಾಗಿ ನಾ ಏನು ಮಾಡೇನ್ರಿ ಅಕ್ಕಾ ಎಂದು ಮೆಸೇಜ್ ಕಳಿಸಿದೆ. ಇಷ್ಟೇ ನೋಡಿ ಅಲ್ಲಿಂದ ಬಂದ ಉತ್ತರ ನೀವೂ ಇನ್ನೂ ಮುಂದೆ ಈ ತರಹದ ಮೆಸೇಜ್ ಕಳಿಸಬೇಡಿ.

ನನಗೆ ಅಕ್ಕ ನೆಂದು ಕರೆದಿದ್ದೀರಿ ನನಗೆ ತುಂಬಾ ಸಂತೋಷ ಇದೆ ಎಂಬ ಮೆಸೇಜ್ ಹಾಕಿ ಆತ್ಮೀಯತೆಗೆ ಎಳ್ಳು ನೀರು ಬಿಟ್ಟರು ಅದಕ್ಕೆ ಸ್ನೇಹಿತರೆ ಯಾವಾಗಲೂ ಒಬ್ಬರನ್ನು ನಂಬುವಾಗ ಎಚ್ಚರಿಕೆ ವಹಿಸಿ
ಅವರ ಪೂರ್ವಾಪರ ತಿಳಿಯಿರಿ.

ಗೆಳೆತನಕ್ಕೆ ಅರ್ಹರೇ ಎಂಬುದನ್ನು ಅರಿಯಿರಿ
ಕೇವಲ ಮಾತಿನಿಂದ ಚೆನ್ನಾಗಿದ್ದರೆ ಸಾಲದು ಮನಸ್ಸು ಸಹ ನಿರ್ಮಲವಾಗಿರಬೇಕು

ಗೆಳೆತನ ಉಳಿಸಿಕೊಳ್ಳಲು ಯೋಗ್ಯತೆ
ಇರುವವರನ್ನು ಆರಿಸಿಕೊಳ್ಳಿ

ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಇನ್ನೊಂದು
ಬಗೆಯುವ ನಯವಂಚಕರಿಂದ ದೂರವಿರಿ

ಎಲ್ಲವನ್ನೂ ಹೇಳಿ
ಮೂರ್ಖರಾಗಬೇಡಿ



ಎನ್ನನ್ನು ಯಾವುದನ್ನು ಯಾವಾಗ ಹೇಳಬೇಕು ಎಂಬುದನ್ನು ಕಲಿಯಿರಿ
ಇದನ್ನು ಒಂದು ಪಾಠ ಎಂದು ಕಲಿತು ತಪ್ಪನ್ನು ತಿದ್ದಿಕೊಳ್ಳಿ

ನಿಮ್ಮ ತಪ್ಪು ಇರದಿದ್ದರೆ
ಅಂತಹ ಗೆಳೆತನವನ್ನು ಬಿಟ್ಟು ಬಿಡಿ

ಸದಾ ಒಳಿತನ್ನೇ ಬಯಸಿ ಹೊಸದನ್ನು ಕಲಿಯಿರಿ
ಧನಾತ್ಮವಾಗಿ ಆಲೋಚಿಸಿ ಸಾಧಿಸಿ, ಹಗೆ ಸಾಧಿಸಬೇಡಿ ಅವರು ಜೀವನಕ್ಕೊಂದು ಪಾಠ ಕಲಿಸಿದ್ದಾರೆ ಎಂದು ತಿಳಿಯಿರಿ

ಅಂದಾಗ ಮಾತ್ರ ನಮ್ಮ ಜೀವನ ಹೊಸ ರೂಪ ತಾಳಿ ಬದುಕ ಭರವಸೆ ಮೂಡುತ್ತದೆ ಎಂಬುವ ಸದಾಶಯ ಇದರಲ್ಲಿದೆ

**– ಮಹೇಶ್ ಎಸ್ ಹೆಚ್**
**ಸರಕಾರಿ ಪ್ರೌಢ ಶಾಲೆ ಹೆಸರೂರ**
**ತಾಲ್ಲೂಕು ಮುಂಡರಗಿ.**

# ಡೆಂಗೆ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಿ

**ಮೊದಲ ಪುಟದಿಂದ**

ಈ ನಿಟ್ಟಿನಲ್ಲಿ ಕೂಡಲೇ ವಿವಿಧ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಇದು ಒಬ್ಬರಿಂದ ಆಗುವ ಕಾರ್ಯವಲ್ಲ. ಅಧಿಕಾರಿಗಳು ಮತ್ತು ಸಿಬ್ಬಂದಿ ತಂಡವಾಗಿ ಕಾರ್ಯನಿರ್ವಹಿಸಬೇಕು. ತಂಡಗಳಾಗಿ ನಗರಗಳಲ್ಲಿನ ಮನೆಮನೆಗೆ ತೆರಳಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಡೆಂಗೆ ಪ್ರಕರಣಗಳ ಸಂಖ್ಯೆ ಇಳಿಮುಖವಾಗುವಂತೆ ನೋಡಿಕೊಳ್ಳಬೇಕು. ನೀರು ನಿಂತಿರುವ ಸ್ಥಳಗಳಲ್ಲಿ ಲಾರ್ವಗಳು ಉತ್ಪತ್ತಿ ಆಗುವುದು ಸಾಮಾನ್ಯ. ಅಂತಹ ಸ್ಥಳಗಳನ್ನು ಗುರುತಿಸಿ ಕೆಮಿಕಲ್ ಸಿಂಪಡಿಸಿ ಅದನ್ನು ನಾಶಪಡಿಸುವ ಕಾರ್ಯ ನಡೆಸಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಡೆಂಗೆ ಜ್ವರ ಇದೆ ಎಂದು ಗೊತ್ತಾದ ಕೂಡಲೇ ತಡಮಾಡದೇ ಚಿಕಿತ್ಸೆ ಪಡೆದುಕೊಳ್ಳುವ ಕಾರ್ಯ ಕೂಡ ಆಗಬೇಕು. ಈ ಬಗ್ಗೆ ಸಹ ಜನರಿಗೆ ಅರಿವು ಮೂಡಿಸಬೇಕು. ಗ್ರಾಮೀಣ ಭಾಗಗಳಲ್ಲಿ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಸಭೆ ನಡೆಸಿ ಅವರಿಗೆ ಈ ವಿಷಯ ತಿಳಿಸಿ ಅವರ ಮೂಲಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ನಗರಾಭಿವೃದ್ದಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ್ ನಾಯಕ, ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ.ಜಂಬಯ್ಯ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ.ಷಣ್ಮುಖ ನಾಯ್ಕ ಬಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ವ್ಯವಸ್ಥಾಪಕರಾದ ಹನುಮಂತಪ್ಪ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲಣಾಧಿಕಾರಿ ಡಾ.ಜಗದೀಶ್ ಪಾಟ್ನೆ, ಜಿಲ್ಲಾ ಕುಷ್ಠರೋಗ ನಿರ್ಮೂಲಾಣಾಧಿಕಾರಿ ಡಾ. ರಾಧಿಕಾ, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್, ಐ.ಎಫ್.ಓ ಮಹಮ್ಮದ್ ತಾಸೀನ್, ಎಸ್.ಎ.ಐ (ಸಿ.ಎಂ.ಸಿ) ಶಶಿಭೂಷಣ ಹಿರೇಮಠ, ಕೆ.ಎಚ್.ಶಿವಕುಮಾರ್, ಜಿ.ಪ್ರಕಾಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಢ । ಸಂವತ್ಸರ: ಕ್ರೋಧಿ

**24-07-2024 – ಬುಧವಾರ**

| | |
|---|---|
| ತಿಥಿ | : ತೃತೀಯ/ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಭಿಷ |
| ಯೋಗ | : ಸೌಭಾಗ್ಯ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:55:24 |
| ಸೂರ್ಯಾಸ್ತ | : 19:11:19 |
| ರಾಹು | : 12:33–14:13 |
| ಯಮಘಂಡ | : 07:35–09:14 |
| ಗುಳಿಕ | : 10:54–12:33 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 23-07-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.16 ಅಡಿ |
| ಒಳ ಹರಿವು | 92636 ಕ್ಯುಸೆಕ್ |
| ಹೊರ ಹರಿವು | 11657 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 90.940 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1599.87 ಅಡಿ |
| ಒಳ ಹರಿವು | 54657 ಕ್ಯುಸೆಕ್ |
| ಹೊರ ಹರಿವು | 125 ಕ್ಯುಸೆಕ್ |
| ಸಾಮರ್ಥ್ಯ | 55.436 ಟಿಎಂಸಿ |

# ಪ್ರವಾಹ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಸನ್ನದ್ಧರಾಗಿ

## ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೂಚನೆ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಸಾಲಿನಲ್ಲಿ ಪ್ರವಾಹ ಉಂಟಾಗುವ ಸಾಧ್ಯತೆ ಮತ್ತು ಪ್ರವಾಹ ಸನ್ನದ್ಧತೆ ಕುರಿತು ಚರ್ಚಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಜುಲೈ 23ರಂದು ಅಧಿಕಾರಿಗಳ ಸಭೆ ನಡೆಸಿದರು.



ಜಿಲ್ಲಾಧಿಕಾರಿಗಳ ಕಚೇರಿ ಕೇಶ್ವಾನ್ ಹಾಲನಲ್ಲಿ ಜಿಪಂ ಸಿಇಒ ಮೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾ, . ಹೊಸಪೇಟೆ ಮತ್ತು ಹರಪಹನಳ್ಳಿ ಸಹಾಯಕ ಆಯುಕ್ತರು, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಉಪ ನಿರ್ದೇಶಕರು, ಜಿಲ್ಲೆಯ ಎಲ್ಲಾ ತಹಶೀಲ್ದಾರರು ಹಾಗೂ ಎಲ್ಲಾ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹ ಣಾಧಿಕಾರಿಗಳು ಮತ್ತುಗ್ರಾಮವಾರುನೋಡಲ್‌ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳು ವಿಡಿಯೋ ಸಂವಾದ ನಡೆಸಿ, ಮುಂಗಾರು ಹಂಗಾಮಿನಲ್ಲಿ ಅತಿಯಾದ ಮಳೆಯಿಂದ ಸಂಭವಿಸುವ ಪ್ರವಾಹ ಪರಿಸ್ಥಿತಿಯ ಮುಂಜಾಗ್ರತ ಕ್ರಮಕೈಗೊಳ್ಳಲು ಹಾಗೂ ಯಾವುದೇ ಸಮಸ್ಯೆ ಆಗದಂತೆ ಎದುರಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳಲು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

2024-25ನೇ ಸಾಲಿನ ಪ್ರವಾಹ ಉಂಟಾಗುವ ಸಾಧ್ಯತೆ ಇರುವ ನದಿಪಾತ್ರದ ಒಟ್ಟು 22 ಗ್ರಾಮಗಳಲ್ಲಿ ನೋಡಲ್ ಅಧಿಕಾರಿಗಳನ್ನು ಈಗಾಗಲೇ ನೇಮಕ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮಳೆಗಾಲ ಮುಗಿಯುವವರೆಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಳೆಗಾಲವನ್ನು ಸಮರ್ಥವಾಗಿ ಎದುರಿಸಲು ಪೂರ್ವಸಿದ್ದತೆಯನ್ನು ಮಾಡಿಕೊಳ್ಳಬೇಕು ಎಂದು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

**ನೋಡಲ್ ಅಧಿಕಾರಿಗಳಿಗೆ ಸೂಚನೆ:** ಜಿಲ್ಲೆಯ ತುಂಗಾಭದ್ರ ಜಲಾಶಯದಲ್ಲಿ 3.00 ಲಕ್ಷ ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಿದಲ್ಲಿ ಮಾತ್ರ ವಿಜಯನಗರ ಜಿಲ್ಲೆಯ ನದಿ ಪಾತ್ರದ 22 ಗ್ರಾಮಗಳಲ್ಲಿ ಪ್ರವಾಹ ಉಂಟಾಗುತ್ತದೆ. ಆದ್ದರಿಂದ ಈಗಾಗಲೇ ನೇಮಕ ಮಾಡಲಾಗಿರುವ ನೋಡಲ್ ಅಧಿಕಾರಿಗಳು ತಮಗೆ ನಿಯೋಜಿಸಲಾದ ಗ್ರಾಮಗಳಿಗೆ ಪ್ರತಿ ವಾರ ಭೇಟಿ ನೀಡಿ ಈ ಕುರಿತು ಅನುಪಾಲನಾ ವರದಿಯನ್ನು 03 ದಿನಗಳೊಳಗೆ ಜಿಲ್ಲಾಡಳಿತಕ್ಕೆ ಸಲ್ಲಿಸಬೇಕು ಎಂದು ಕಟ್ಟುನಿಟ್ಟಿ ನಿರ್ದೇಶನ ನೀಡಿದರು. ನದಿ ಪಾತ್ರದ ಗ್ರಾಮಗಳಲ್ಲಿನ ಎಲ್ಲಾ ಇಲಾಖೆಯ ಸರ್ಕಾರಿ ನೌಕರರ ಮೊಬೈಲ್ ನಂಬರ್ ಪಡೆದು ಪಟ್ಟಿಯನ್ನು ತಮ್ಮಲ್ಲಿ ಸಂಗ್ರಹಿಸಿ ಇಟ್ಟುಕೊಂಡು ಪ್ರತಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಲು ಇದೆ ಜಿಲ್ಲಾಧಿಕಾರಿಗಳು ತಹಶೀಲ್ದಾರರಿಗೆ ಸೂಚನೆ ನೀಡಿದರು.

**ಪ್ರವಾಹ ಪರಿಸ್ಥಿತಿಯ ಅರಿವು ಮೂಡಿಸಿ:** ಹರಪನಹಳ್ಳಿ ತಾಲೂಕಿನಲ್ಲಿ ಪುರಸಭೆಯ ವಾಹನಗಳ ಮೂಲಕ 05 ಪಂಚಾಯಿತಿಯಲ್ಲಿ ಪ್ರವಾಹ ಪರಿಸ್ಥಿತಿಯ ಮುಂಜಾಗ್ರತ ಕ್ರಮಗಳ ಬಗ್ಗೆ ಪ್ರಚುರಪಡಿಸಿದ ಹರಪನಹಳ್ಳಿ ತಹಶೀಲ್ದಾರರು ಸಭೆಗೆ ತಿಳಿಸಿದರು.

**ಸಹಾಯವಾಣಿ ಸುಸ್ಥಿತಿಯಲ್ಲಿರಲಿ:** ಜಿಲ್ಲೆಯ ಎಲ್ಲಾ ತಹಶೀಲ್ದಾರರಕಚೇರಿಯಲ್ಲಿಸಹಾಯವಾಣಿಯನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲು ಜಿಲ್ಲಾಧಿಕಾರಿಗಳು ಎಲ್ಲ ತಹಸೀಲ್ದಾರರಿಗೆ ನಿರ್ದೇಶನ ನೀಡಿದರು. .

**ಶುದ್ಧ ಕುಡಿಯುವ ನೀರು ಪೂರೈಸಿ:** ಹರಪನಹಳ್ಳಿ ತಾಲೂಕಿನಲ್ಲಿ ಹಲವಾಗಲು ಗ್ರಾಮದಲ್ಲಿ ಕುಡಿಯುವ ನೀರಿನ ಒಹೆಚ್‌ಟಿಗಳನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರನ್ನು ಮಾತ್ರ ಸರಬರಾಜು ಮಾಡಲು ಜಿಲ್ಲಾಧಿಕಾರಿಗಳು ಹರಪನಹಳ್ಳಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚನೆ ನೀಡಿದರು. ತಪ್ಪಿದಲ್ಲಿ ತಹಶೀಲ್ದಾರರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಮೇಲಧಿಕಾರಿಗಳಿಗೆ ವರದಿ ಮಾಡಲಾಗು ವುದೆಂದು ತಿಳಿಸಿದರು.

**ನೀರಿನ ಮೂಲಕ ಶುಚಿಯಾಗಿರಲಿ:** ಮಳೆಗಾಲ ಇರುವುದರಿಂದ ಎಲ್ಲಾ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಓಹೆಚ್‌ಟಿ ಟ್ಯಾಂಕರ್ ಹಾಗೂ ಇನ್ನಿತರೆ ಮೂಲಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಸ್ವಚ್ಛಗೊಳಿಸಿ ಇಡಲು ಜಿಲ್ಲಾಧಿಕಾರಿಗಳು, ಜಿಲ್ಲೆಯ ಎಲ್ಲಾ ತಹಶೀಲ್ದಾರರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯ ಸಹಾಯಕ ಕಾರ್ಯನಿರ್ವಾಹ ಅಭಿಯಂತರರಿಗೆ ಸೂಚನೆ ನೀಡಿದರು.

22 ಗ್ರಾಮಗಳ ನೋಡಲ್ ಅಧಿಕಾರಿಗಳಿಗೆ ಮೇಲ್ವಿಚಾರಣೆ ಮಾಡಲು ತಾಲೂಕುವಾರು ಮೇಲ್ವಿಚಾರಣಾಧಿಕಾರಿಗಳನ್ನಾಗಿ ಹೊಸಪೇಟೆ ಹರಪನಹಳ್ಳಿ ಸಹಾಯಕ ಆಯುಕ್ತರನ್ನು, ಜಂಟಿ ಕೃಷಿ ನಿರ್ದೇಶಕರು, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಇವರನ್ನು ನಿಯೋಜಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಎಡಿಸಿ ಅನುರಾಧ ಜಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಅತಿಥಿ ಉಪನ್ಯಾಸಕರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಶೈಕ್ಷಣಿಕ ಸಾಲಿನಲ್ಲಿ ಹೊಸಪೇಟೆಯ ಅಲ್ಪಸಂಖ್ಯಾತರ ಸರಕಾರಿ ಮೌಲಾನ ಆಜಾದ್ ಮಾದರಿ ಶಾಲೆಯನ್ನು ಉನ್ನತೀಕರಿಸಿ ಪದವಿ ಪೂರ್ವ (ಪಿಯುಸಿ) ಕಾಲೇಜನ್ನಾಗಿಸಿದ್ದು ಈ ಕಾಲೇಜಿಗೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ಆಸಕ್ತ ಅಭ್ಯರ್ಥಿಗಳು ಜಂಬುನಾಥಹಳ್ಳಿಯ ಆದರ್ಶ ವಿದ್ಯಾಲಯದ ಪಕ್ಕದಲ್ಲಿರುವ ಹೊಸಪೇಟೆಯ ಮೌಲಾನಾ ಆಜಾದ್ ಮಾದರಿ ಕಾಲೇಜಿಗೆ ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ: 9964732718ಗೆ ಸಂಪರ್ಕಿಸಬಹುದಾಗಿದೆ.

# ಪಿಯುಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಶೈಕ್ಷಣಿಕ ಸಾಲಿನಲ್ಲಿ ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜಿನ ಪಿಯುಸಿ ಪ್ರವೇಶಕ್ಕಾಗಿ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಆಜಾದ್ ಮಾದರಿ ಶಾಲೆಯನ್ನು ಉನ್ನತೀಕರಿಸಿ ಪದವಿ ಪೂರ್ವ (ಪಿಯುಸಿ) ಪ್ರಾರಂಭಿಸಿದ್ದು, ಕಾಲೇಜಿನಲ್ಲಿ ಪಿಯುಸಿ ವಿದ್ಯಾಥಿಗಳ ಪ್ರವೇಶವನ್ನು ಆರಂಭಿಸಿದ್ದು ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆಯ ಜಂಬುನಾಥಹಳ್ಳಿ ಹತ್ತಿರದ ಮೌಲಾನಾ ಆಜಾದ್ ಮಾದರಿ ಕಾಲೇಜಿಗೆ ಅಥವಾ ಮೊ: 9945951963, 9964732718 ಗೆ ಸಂಪರ್ಕಿಸಬದಾಗಿದೆ ಎಂದು ಹೊಸಪೇಟೆಯ ಮೌಲಾನ ಆಜಾದ್ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರು ತಿಳಿಸಿದ್ದಾರೆ.

# ಯೋಗ, ಧ್ಯಾನ ಅತ್ಯವಶ್ಯ

**ಮೊದಲ ಪುಟದಿಂದ**

ಮಲ್ಲಿಗೆ ಪ್ಯಾರಾಮೆಡಿಕಲ್ ಕಾಲೇಜ್ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮೆದುಳು ದಿನಾಚರಣೆ ಅಂಗವಾಗಿ ಜುಲೈ 22ರಂದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನುಷ್ಯನ ದೇಹದಲ್ಲಿ ಮೆದುಳು ಸಹ ಮುಖ್ಯ ಪಾತ್ರವಹಿಸುತ್ತದೆ. ದೈಹಿಕ ಚಟುವಟಿಕೆ, ಆರೋಗ್ಯಕರ ನಿದ್ರೆ, ಆರೋಗ್ಯಕರ ಹವ್ಯಾಸಗಳು, ಹೊಸ ಚಟುವಟಿಕೆಗಳು, ಸಂಘ ಜೀವಿಯಾಗಿರುವುದು ಸೇರಿದಂತೆ ಮುಂತಾದ ದೈನಂದಿನ ಚಟುವಟಿಕೆಗಳಿಂದ ಮೆದುಳನ್ನು ಆರೋಗ್ಯದಿಂದಡಬಹುದು ಎಂದರು.

ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಎನ್.ಸಲೀಂ, ಜಿಲ್ಲಾ ಕುಷ್ಠರೋಗ ನಿರ್ಮಾಲನಾಧಿಕಾರಿ ಡಾ.ರಾಧಿಕಾ ಕೆ., ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಫಿಜಿಷಿಯನ್ ಡಾ.ಸೋಮಶೇಖರ ಕೆ., ಜಿಲ್ಲಾ ಮಟ್ಟದ ಅಧಿಕಾರಿಗಳಾದ ಆರ್.ಸಿ.ಹೆಚ್ ಅಧಿಕಾರಿ ಡಾ.ಜಂಬಯ್ಯ, ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ವಿನಯ್, ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಜಗದೀಶ ಪಾಟ್ನೆ, ಸರ್ವೇಕ್ಷಣಾಧಿಕಾರಿ ಡಾ.ಷಣ್ಮುಖ ನಾಯ್ಕ್, ಆರೋಗ್ಯ ಶಿಕ್ಷಣಾಧಿಕಾರಿ ಡಾ.ದೊಡ್ಡಮನಿ ಎಂ.ಪಿ., ಸಂಯೋಜಕರು ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಗಿರೀಶ್ ಆರ್, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ್ ಡಿ ಹಾಗೂ ಇನ್ನೀತರರು ಉಪಸ್ಥಿತರಿದ್ದರು. ಡಾಕ್ಟರ್ ಸೋಮಶೇಖರ್ ಕಬ್ಬೇರ್ ಅವರು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮಕ್ಕು ಮೊದಲು ಮಾರ್ಕಂಡೇಶ್ವ ದೇವಸ್ಥಾನದಿದಂದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯವರೆಗೆ ಜನಜಾಗೃತಿ ಜಾಥಾ ನಡೆಯಿತು.

# ವಿವಿಧ ಖಾಲಿ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ಮೊದಲ ಪುಟದಿಂದ**

ನಿರೀಕ್ಷಾಧಿಕಾರಿ 2 ಹಾಗೂ ಮನೋರೋಗ ತಜ್ಞರ 2 ಹುದ್ದೆಗಳು ಖಾಲಿ ಇವೆ. ಮತ್ತು ಶುಶ್ರೂಷಕಿಯರು 10 ಹುದ್ದೆಗಳು ಖಾಲಿ ಇದ್ದು ಅಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ https://vijayanagara.nic.in/ ಗೆ ಭೇಟಿ ನೀಡಬಹುದು.

ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರ ದಂತಿರುತ್ತದೆ. ಆಯ್ಕೆಯ ಪ್ರಕ್ರಿಯೆ ಯಾವುದೇ ಬದಲಾವಣೆ ಯಾದರು ಆಯ್ಕೆ ಸಮಿತಿ ತೀರ್ಮಾ ನವೇ ಅಂತಿಮವಾಗಿರುತ್ತದೆ. ಕೋವಿಡ್-19 ರಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸದವರಿಗೆ ಆದ್ಯತೆ ನೀಡಲಾ ಗುವುದು, 6 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇಕಡ 2ರಷ್ಟು ಕೃಪಾಂಕ, 6 ತಿಂಗಳು 1 ದಿನದಿಂದ 12 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೆ.4ರಷ್ಟು ಕೃಪಾಂಕ, 12 ತಿಂಗಳು 1 ದಿನದಿಂದ 18 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.6ರಷ್ಟು ಕೃಪಾಂಕ, 18 ತಿಂಗಳು 1 ದಿನದಿಂದ 24 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.8ರಷ್ಟು ಕೃಪಾಂಕ ನೀಡಲಾಗುವುದು.

ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಶೇಕಡ ಮತ್ತು ಕೋವಿಡ್-19 ಸೇವಾ ಅವಧಿಯ ಕೃಪಾಂಕವನ್ನು ಒಟ್ಟುಗೂಡಿಸಿ ಮೆರಿಟ್ ಲಿಸ್ಟನ್ನು ತಯಾರಿಸಲಾಗುವುದು ಮತ್ತು ಹೋಸ ರೋಸ್ಟರ್ ಆಧಾರದ ಮೇಲೆ ಮೇರಿಟ್ ಕಂ ರೋಸ್ಟರ್ ಆಧಾರ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು.

ಈ ವಿವಿಧ ಹುದ್ದೆಗಳಿಗೆ ನಿಯಾಮಾನುಸಾರ ಕಂಪ್ಯೂಟರ್‌ನ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. (ತಜ್ಞ ವೈದ್ಯರು, ಮತ್ತು ಗ್ರೂಪ್ ಡಿ) ಹುದ್ದೆಗಳಿಗೆ ಅನ್ವಯಿಸುವುದಿಲ್ಲ, ಸ್ತ್ರೀರೋಗ-ಪ್ರಸೂತಿ ತಜ್ಞರು, ಮಕ್ಕಳ ತಜ್ಞರು, ಮನೋರೋಗ ತಜ್ಞರು ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳ ಹುದ್ದೆಗಳು, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಹುದ್ದೆಗಳ ಸಂಖ್ಯೆ ತುಂಬುವವರೆಗೂ ಪ್ರತಿ ಮಂಗಳವಾರ ವಾಕ್‌ಇನ್ ಮೂಲಕ ಆಯ್ಕೆ ಪ್ರಕ್ರಿಯೆ ಮಾಡಲಾಗುವುದು.

ಅರ್ಜಿಗಳನ್ನು ಸ್ವೀಕರಿಸಲು ಜುಲೈ 29 ರವರೆಗೆ ಅವಕಾಶವಿರಲಿದೆ. ಅರ್ಜಿಗಳನ್ನು ಕಚೇರಿಯ ಸಮಯದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ 60 ಹಾಸಿಗೆಯ ಎಮ್.ಸಿ.ಹೆಚ್ ಆಸ್ಪತ್ರೆ ಹಿಂಭಾಗ ಮಸೀದಿ ಹತ್ತಿರ ಹೊಸಪೇಟೆ ಇಲ್ಲಿ ಜುಲೈ 29ರ ಸಂಜೆ 5.30 ರೊಳಗೆ ಸ್ವೀಕರಿಸಲಾಗುವುದು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗು ವುದಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಸಂಘದ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಹುದ್ದೆಗಳ ವಿವರ, ಕನಿಷ್ಟ ವಿದ್ಯಾರ್ಹತೆ ಮತ್ತು ಆಯ್ಕೆ ವಿಧಾನ, ಒಟ್ಟು ಹುದ್ದೆಗಳು, ಮೀಸಲಾತಿಯ ವಿವರ, ಮಾಸಿಕ ಸಂಚಿತ ವೇತನ ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ ಎಂದು ತಿಳಿಸಿದೆ.

# ಬಾಲ್ಯ ವಿವಾಹ ದುಷ್ಪರಿಣಾಮ : ಮಕ್ಕಳಿಗೆ ಅರಿವು ಮೂಡಿಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಾಲ್ಯ ವಿವಾಹ ಹಾಗೂ ಪೋಕ್ಸೊ ಪ್ರಕರಣಗಳ ಕುರಿತು ಶಾಲಾ-ಕಾಲೇಜುಗಳಲ್ಲಿ ಹೆಚ್ಚಿನ ಅರಿವು ಕಾರ್ಯಕ್ರಮ ಹಮ್ಮಿಕೊಂಡು ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ರೀಡ್ಸ್ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪೊಲೀಸ್ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ "ಪೋಕ್ಸೋ ಕಾಯ್ದೆ-2012", "ಬಾಲ್ಯವಿವಾಹ ನಿಷೇಧ ಕಾಯ್ದೆ-2006" ಕುರಿತು ಸೇವಾನಿರತ ಪೊಲೀಸ್ ಅಧಿಕಾರಿಗಳು ಹಾಗೂ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಹಾಗೂ ತನಿಖಾ ಸಹಾಯಕ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಬಾಲ್ಯ ವಿವಾಹ ಪ್ರಕರಣ ಹೆಚ್ಚಾಗುತ್ತಿದ್ದು, ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮದ ಕುರಿತು ಸಾರ್ವಜನಿಕರಲ್ಲಿ ಕಾನೂನು ಅರಿವು ಮೂಡಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರು ಸಿಐಡಿ ಕಚೇರಿಯ ಎಸ್.ಜೆ.ಪಿ.ಯು ಘಟಕದ ಪೊಲೀಸ್ ತರಬೇತುದಾರರಾದ ಸಿ.ಜೆ.ರೋಹಿತ್ ಅವರು ಪೊಲೀಸ್ ಇಲಾಖೆ ಹಾಗೂ ಇತರೆ ಮಕ್ಕಳ ರಕ್ಷಣಾ ಇಲಾಖೆಗಳ ಭಾಗೀದಾರರಿಗೆ ತರಬೇತಿ ನೀಡಿದರು.

ಕಾರ್ಯಾಗಾರದಲ್ಲಿ ಎಎಸ್ಪಿಗಳಾದ ರವಿಕುಮಾರ್ ಕೆ.ಪಿ., ನವೀನ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಲಾಲಪ್ಪ, ಡಿಎಸ್‌ಪಿ ಹಾಗೂ ಹಿರಿಯ ಮಕ್ಕಳ ಕಲ್ಯಾಣಾಧಿಕಾರಿ ಚಂದ್ರಕಾಂತ ನಂದಾರೆಡ್ಡಿ, ರೀಡ್ಸ್ ಸಂಸ್ಥೆಯ ತಿಪ್ಪೇಶಪ್ಪ ಸೇರಿದಂತೆ ಜಿಲ್ಲೆಯ ಎಲ್ಲಾ ಪೊಲೀಸ್ ಇನ್ಸ್‌ಪೆಕ್ಟರ್, ಇತರರಿದ್ದರು.

**ಸಾರ್ವಜನಿಕ ಪ್ರಕಟಣೆ**

**ಮನೆ ದಾಖಲೆ ಕಳೆದಿದೆ**

ಶ್ರೀ ಬಿ.ಮಾಧವಿ ಗಂಡ ಬಿ.ಮಂಜುನಾಥ ಉಕ್ಕಡಕೇರಿ ನಿವಾಸಿಯಾದ ನಾನು ಈ ಕೆಳಗೆ ಕಾಣಿಸಿದ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದ ಮೂಲ ದಾನ ಪತ್ರವು ದಿನಾಂಕ 8.7.2024 ರಂದು ಹೊಸಪೇಟೆ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಹತ್ತಿರ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ.

ಡೋರ್ ನಂಬರ್ #115, ಅಸೆಸ್ಮೆಂಟ್ ನಂಬರ್: 115, ಸದರಿ ಷೆಡ್ಯೂಲ್‌ನಲ್ಲಿ ಕಾಣಿಸಿದ ದಾನ ಪತ್ರವು ಸಬ್ ರಿಜಿಸ್ಟ್ರರ್ ನೋಂದಣಿ ಸಂಖ್ಯೆ HSP.-1-01074-2006-07, ಸಿ.ಡಿ.ನಂ: HSPD 19 ದಿನಾಂಕ 14-06-2006ರಲ್ಲಿ ನೋಂದಣಿಯಾಗಿರುತ್ತದೆ. ಸದರಿ ಮೂಲ ದಾನ ಪತ್ರವು (ORIGINAL GIFT DEED) ಯಾರಿಗಾದರೂ ಸಿಕ್ಕದಲ್ಲಿ ಅದನ್ನು ಸಮೀಪದ ಪೊಲೀಸ್ ಠಾಣೆ ಅಥವಾ, ಕೆ.ವಿ.ಬಸವರಾಜ ವಕೀಲರು ಹೊಸಪೇಟೆ ಮೊ:9844029732, ಬಿ.ಮಂಜುನಾಥ ತಂದೆ ಮನೋಹರ, 35ನೇ ವಾರ್ಡ್, ಉಕ್ಕಡಕೇರಿ, ಹೊಸಪೇಟೆ ಮೊ:8722911119ಗೆ ತಿಳಿಸಬೇಕೆಂದು ಕೋರಲಾಗಿದೆ.

**ಷೆಡ್ಯೂಲ್ ಆಸ್ತಿ ವಿವರ:** ಪೂರ್ವ-ಪಶ್ಚಿಮ=15 ಅಡಿ, ಉತ್ತರ-ದಕ್ಷಿಣ: 20 ಅಡಿ, ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಾರಾಯಣಪ್ಪ ಇವರ ಮನೆ, ಉತ್ತರಕ್ಕೆ ಮಣ್ಣೆಪ್ಪ ಇವರ ಮನೆ, ದಕ್ಷಿಣಕ್ಕೆ ಹುಲುಗಣ್ಣ ಇವರ ಮನೆ ಇರುತ್ತದೆ

**SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ**

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SCAN & READ E-PAPER

SSLC MATHS Hampi Times Margadarshi


## ಬಹುಪದೋಕ್ತಿಗಳು

p(x) ದಲ್ಲಿನ 'x' ದ ಗರಿಷ್ಠ ಘಾತ ಸೂಚಿಯನ್ನು p(x) ದ ಮಹತ್ತಮ ಘಾತ(ಡಿಗ್ರಿ) ಎನ್ನುತ್ತಾರೆ.


ವರ್ಗ ಬಹುಪದೋಕ್ತಿ $ax^2 + bx + c$ ಶೂನ್ಯತೆಗಳ ಮೊತ್ತ = $\frac{-b}{a}$ ಹಾಗೂ ಶೂನ್ಯತೆಗಳ ಗುಣಲಬ್ಧ = $\frac{c}{a}$

$p(x) = g(x).q(x) + r(x)$ ಬಹುಪದೋಕ್ತಿಯ


ಶೂನ್ಯತೆಗಳು ದತ್ತ ವಕ್ರರೇಖೆಯು x ಅಕ್ಷವನ್ನು ಎಷ್ಟು ಬಾರಿ ಛೇದಿಸುತ್ತದೆಯೋ ಆ ಸಂಖ್ಯೆಯು ಆ ನಕ್ಷೆಯ ಶೂನ್ಯತೆ ಆಗಿರುತ್ತದೆ.



ಇದರ ಶೂನ್ಯತೆ 1



ಇದರ ಶೂನ್ಯತೆ 3



ಈ ಮೇಲಿನವುಗಳ ಶೂನ್ಯತೆಯನ್ನು ಬರೆಯಿರಿ

1) $P(x) = x^3 + 2x^2 + x + 6$
ಬಹುಪದೋಕ್ತಿಯ ಮಹತ್ತಮ ಘಾತ 3 (ಯಾವುದು ದೊಡ್ಡ ಘಾತವೋ ಅದೇ ಅದರ ಮಹತ್ತಮ ಘಾತ)

2) ಈ ಬಹುಪದೋಕ್ತಿಯ ಮಹತ್ತಮ ಘಾತ ಎಷ್ಟು? $P(x) = 5x^2 + 2x^5 - 7x^3 + 3x - 12$

ಈ ಕೆಳಗಿನ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ

$x^2 - 2x - 8$
$= x^2 - 4x + 2x - 8$
$= x(x-4) + 2(x-4)$
$= (x-4)(x+2)$
$\Rightarrow x = 4$ ಮತ್ತು $x = -2$ ಶೂನ್ಯತೆಗಳು

ಶೂನ್ಯತೆಗಳ ಮೊತ್ತ $\alpha + \beta = \frac{-b}{a}$

$4 + (-2) = \frac{-(-2)}{1}$
$2 = 2$

ಶೂನ್ಯತೆಗಳ ಗುಣಲಬ್ಧ $\alpha\beta = \frac{c}{a}$

$(4)(-2) = \frac{-8}{1}$
$-8 = -8$

ಇದೇ ರೀತಿ ಈ ಮುಂದಿನ ಸಮಸ್ಯೆಗಳನ್ನು ಬಿಡಿಸಿ

(1) $6x^2 - 3 - 7x$ (2) $3x^2 - x - 4$

ಬಹುಪದೋಕ್ತಿಯ ರಚಿಸಲು ಈ ಮುಂದಿನ ಸೂತ್ರ ಬಳಸಿ

$$x^2 - (\alpha + \beta)x + \alpha\beta$$

ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧ ಹೊದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

ಉದಾ: 4 ಮತ್ತು 1

$x^2 - (\alpha + \beta)x + \alpha\beta$
$x^2 - (4 + 1)x + 4 \times 1$
$x^2 - 5x + 4$

ಇದೇ ರೀತಿ

1) $\frac{1}{4}$ ಮತ್ತು $-1$ (2) $\sqrt{2}$ ಮತ್ತು $\frac{1}{3}$

ಇಲ್ಲಿಯವರೆಗೆ ಪರೀಕ್ಷೆಗೆ ಕೇಳಿರುವ ಪ್ರಶ್ನೆಗಳು

ಈ ಬಹುಪದೋಕ್ತಿಯ ಮಹತ್ತಮ ಘಾತ ಬರೆಯಿರಿ

1) $p(x) = x^3 + 2x^2 - 5x - 6$ (ಜೂನ್ 2019)

2) $g(p) = 7p^4 - 2p^3 - 3p^2 + p - 3$ (ಏಪ್ರಿಲ್ 2024)

3) $p(x) = 3x^3 - 8x^2 + 6x + 3$ (ಏಪ್ರಿಲ್ 2023)

4) k ನ ಯಾವ ಬೆಲೆಗೆ ಬಹುಪದೋಕ್ತಿ $p(x) = x^2 - x - (2k+2)$ ರ ಒಂದು ಶೂನ್ಯತೆಯು $-4$ ಆಗಿರುತ್ತದೆ (ಜೂನ್ 2019)

5) ರೇಖಾತ್ಮಕ ಸಮೀಕರದ ಮಹತ್ತಮ ಘಾತ (ಡಿಗ್ರಿ) ಬರೆಯಿರಿ (ಏಪ್ರಿಲ್ 2020)

6) $p(x) = 2x^2 - 6x + k$ ಈ ಬಹುಪದೋಕ್ತಿಯ ಶೂನ್ಯತೆಗಳ ಮೊತ್ತವು ಅವುಗಳ ಗುಣಲಬ್ಧದ ಅರ್ಧದಷ್ಟಕ್ಕೆ ಸಮನಾದರೆ k ಬೆಲೆಯನ್ನು ಕಡುಹಿಡಿಯಿರಿ. (ಸೆಪ್ಟಂಬರ್ 2020)

www.hampitimes.com - Hampi Times Margadarshi

Prepared by : **M.S. MANJUNATHA** Teacher, Hagaraibommanahalli Tq

**ಸಾಯಿಮಣಿ ಪ್ರಕಾಶನ, ಹೊಸಪೇಟೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA